# ತೊಬೀತನ ಗ್ರಂಥ

## ಮುನ್ನುಡಿ

ತೊಬೀತನ ಗ್ರಂಥ ಮೂಲತಃ ಹಿಬ್ರೂ ಅಥವಾ ಅರಮಾಯಿಕ್ ಭಾಷೆಯಲ್ಲಿ ಬರೆಯಲಾದುದು. ಯೆಹೂದ್ಯ ಧರ್ಮಕ್ಕೆ ಪ್ರಾಮಾಣಿಕರಾಗಿ ನಡೆದುಕೊಳ್ಳುವ ಜನರಿಗೆ ದೇವರು ಅದ್ಭುತಕರವಾಗಿ ನೆರವಾಗುತ್ತಾರೆ ಎಂಬುದನ್ನೂ ಜೊತೆಗೆ ಯೆಹೂದ್ಯ ಭಕ್ತಿ ಮತ್ತು ನೈತಿಕತೆಯನ್ನೂ ಬೋಧಿಸುತ್ತದೆ ಈ ಗ್ರಂಥ. ಹೊಸ ಒಡಂಬಡಿಕೆಯ ಪೂರ್ವಕಾಲದಲ್ಲಿ ರೂಢಿಯಲ್ಲಿದ್ದ ಯೆಹೂದ್ಯ ಧರ್ಮ ಹಾಗೂ ಸಂಸ್ಕೃತಿಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತದೆ. ಅಲ್ಲದೆ, ದಾನಧರ್ಮ ಹಾಗು ಶವಸಂಸ್ಕಾರದಂಥ ಸತ್ಕಾರ್ಯಗಳು ಶ್ರೇಷ್ಠ ಪುಣ್ಯಕಾರ್ಯಗಳೆಂಬುದನ್ನು ಒತ್ತಿ ಹೇಳುತ್ತದೆ. ಈ ಗ್ರಂಥದ ಕಾಲ ಸುಮಾರು ಕ್ರಿ. ಪೂ. 200.

## ಪರಿವಿಡಿ

| | | | | |
|---|---|---|---|---|
| ತೊಬೀತನು ಮತ್ತು ಸಾರ ಅನುಭವಿಸಿದ ಯಾತನೆ ಮತ್ತು ಮಾಡಿದ ಪ್ರಾರ್ಥನೆ | – | 1.1 | – | 3.15 |
| ಪ್ರಾರ್ಥನೆಗೆ ಪ್ರತ್ಯುತ್ತರ | – | 3.16 | – | 11.18 |
| (ಅ) ದೇವರಿಂದ ಬಂದ ದೂತ ರಫಯೇಲ್ | – | 3.16 | – | 3.17 |
| (ಆ) ತೊಬಿಯಾಸನಿಗೆ ತೊಬೀತನ ಬುದ್ಧಿವಾದ | – | 4.1 | – | 4.21 |
| (ಇ) ರಫಯೇಲನೊಡನೆ ತೊಬಿಯಾಸನ ಪ್ರಯಾಣ | – | 5.1 | – | 7.12 |
| (ಈ) ಸಾರಳೊಡನೆ ತೊಬಿಯಾಸನ ವಿವಾಹ | – | 7.13 | – | 9.6 |
| (ಉ) ಮರಳಿ ಬಂದ ರಫಯೇಲ್ | – | | | |
| ತೊಬೀತನ ಕುರುಡುತನದ ನಿವಾರಣೆ | – | 10.1 | – | 11.18 |
| ದೂತನಾದ ರಫಯೇಲನ ನಿಜಸ್ವರೂಪ | – | 12.1 | – | 12.22 |
| ತೊಬೀತನಿಂದ ದೇವರಿಗೆ ಧನ್ಯವಾದ ಹಾಗು ತೊಬಿಯಾಸನಿಗೆ ಬುದ್ಧಿವಾದ | – | 13.1 | – | 14.15 |

## ಪೀಠಿಕೆ

**1** ಇದು ತೊಬೀತನ ಜೀವನ ಚರಿತ್ರೆ. ತೊಬೀತನು ತೊಬಿಯೇಲನ ಮಗ, ತೊಬಿಯೇಲನು ಅನಾನಿಯೇಲನ ಮಗ; ಅನಾನಿಯೇಲನು ಅದುಯೇಲನ ಮಗ; ಅದುಯೇಲ ಗಬಯೇಲನ ಮಗ; ಗಬಯೇಲನು ರಫಯೇಲನ ಮಗ; ರಫಯೇಲನು ರಾಗುಯೇಲನ ಮಗ; ರಾಗುಯೇಲನು ಅಸಿಯೇಲನ ಕುಟುಂಬದವನು ಹಾಗು ನಫ್ತಾಲಿಯ ಕುಲಕ್ಕೆ ಸೇರಿದವನು. 2ಅಸ್ಸೀರಿಯದ ರಾಜನಾಗಿದ್ದ ಶಲ್ಮನೇಸರನ ಕಾಲದಲ್ಲಿ ತೊಬೀತನು ತಿಸ್ಬೆಯೆಂಬ ಪಟ್ಟಣದಿಂದ ಗಡೀಪಾರಾದನು. ತಿಸ್ಬೆ ಉತ್ತರ ಗಲಿಲೇಯದಲ್ಲಿ ಇದೆ. ಇದು ನಫ್ತಾಲಿ ಪ್ರಾಂತ್ಯದ ಕಾದೇಶಿಗೆ ದಕ್ಷಿಣದಲ್ಲಿ, ಅಂದರೆ ಹಾಜೋರಿಗೆ ವಾಯುವ್ಯದಲ್ಲಿ, ಫೋಗೋರಿಗೆ ಉತ್ತರದಲ್ಲಿ ಇದೆ.

## ತೊಬೀತನ ಬಾಲ್ಯ

3 ತೊಬೀತನಾದ ನಾನು ನನ್ನ ಜೀವಮಾನದಲ್ಲೆಲ್ಲಾ ಪ್ರಾಮಾಣಿಕನಾಗಿದ್ದೆ; ಸನ್ಮಾರ್ಗದಲ್ಲಿ ನಡೆದೆ. ಅಸ್ಸೀರಿಯ ದೇಶದ ರಾಜಧಾನಿಯಾಗಿದ್ದ ನಿನೆವೆ ನಗರಕ್ಕೆ ನನ್ನೊಡನೆ ಗಡೀಪಾರಾದ ಬಂಧು ಬಾಂಧವರಿಗೂ ಸಹ–ಜುದೇಯರಿಗೂ ಧಾರಾಳವಾಗಿ ದಾನಧರ್ಮ ಮಾಡಿಕೊಂಡು ಬಂದೆ.

4 ನಾನು ಚಿಕ್ಕ ವಯಸ್ಸಿನಿಂದ ನನ್ನ ನಾಡಾದ ಇಸ್ರಯೇಲಿನಲ್ಲೇ ವಾಸವಾಗಿದ್ದೆ. ದೇವರು ತಮ್ಮ ಪವಿತ್ರ ಹಾಗೂ ಶಾಶ್ವತ ನಿವಾಸಕ್ಕಾಗಿ ಒಂದು ಮಹಾದೇವಾಲಯವನ್ನು ಕಟ್ಟಿ ಪ್ರತಿಷ್ಠಾಪಿಸಲು ಇಸ್ರಯೇಲಿನ ಎಲ್ಲಾ ಪಟ್ಟಣಗಳಲ್ಲಿ ಜೆರುಸಲೇಮನ್ನೇ ಆರಿಸಿಕೊಂಡಿದ್ದರು. ಆಗ ಇಸ್ರಯೇಲಿನ ಎಲ್ಲಾ ಕಾಲದ ಕುಲಗಳು ಜೆರುಸಲೇಮಿಗೇ ಬಂದು ಬಲಿಯರ್ಪಣೆ ಮಾಡಬೇಕಾಗಿತ್ತು. ಆದರೆ ನನ್ನ ಇಡೀ ನಫ್ತಾಲಿ ಕುಲವು ಜೆರುಸಲೇಮ್ ಪಟ್ಟಣವನ್ನು ನಿರಾಕರಿಸಿತ್ತು. ದಾವೀದನ ಮನೆತನವನ್ನೇ ತ್ಯಜಿಸಿಬಿಟ್ಟಿತ್ತು. 5ಆದುದರಿಂದ ನಫ್ತಾಲಿ ಕುಲಕ್ಕೆ ಸೇರಿದ ಇತರರಂತೆ ನನ್ನ ಕುಟುಂಬಸ್ಥರು ಉತ್ತರ ಗಲಿಲೇಯದ ಬೆಟ್ಟ ಗುಡ್ಡಗಳಲ್ಲಿ ಬಲಿಯರ್ಪಿಸುತ್ತಿದ್ದರು. ಇಸ್ರಯೇಲಿನ ಅರಸ ಯಾರೊಬ್ಬಾಮನು ದಾನ್ ಪಟ್ಟಣದಲ್ಲಿ ಸ್ಥಾಪಿಸಿದ್ದ ಹೋರಿಕರುವಿಗೆ ಅಲ್ಲಿ ಬಲಿಯರ್ಪಣೆ ಮಾಡುತ್ತಿದ್ದರು.

## ಸನಾತನ ಧರ್ಮಕ್ಕೆ ತೊಬೀತನ ಪ್ರಾಮಾಣಿಕತೆ

6 ಸನಾತನ ಧರ್ಮನಿಯಮದ ಪ್ರಕಾರ ಪ್ರತಿಯೊಬ್ಬ ಇಸ್ರಯೇಲನು ಹಬ್ಬಗಳ ಆಚರಣೆಗಾಗಿ ಜೆರುಸಲೇಮಿಗೆ ಹೋಗಬೇಕಾಗಿತ್ತು. ಅದರಂತೆ ನನ್ನ ಕುಟುಂಬದಲ್ಲಿ ಜೆರುಸಲೇಮಿಗೆ ಅನೇಕ ಸಾರಿ ವಿಧಿಬದ್ಧವಾಗಿ ಹೋಗುತ್ತಿದ್ದವನು ನಾನೊಬ್ಬನೇ. ಬೆಳೆಗಳ ಪ್ರಥಮ ಫಲಗಳು, ಪಶುಪ್ರಾಣಿಗಳ ಚೊಚ್ಚಲು ಮರಿಗಳು, ದನಕರುಗಳ ದಶಮಾಂಶ, ಕುರಿಗಳ ಹೊಸ ಉಣ್ಣೆ ಇದೆಲ್ಲವನ್ನು ತೆಗೆದುಕೊಂಡು ಜೆರುಸಲೇಮಿಗೆ ಧಾವಿಸುತ್ತಿದ್ದೆ. ಇವುಗಳನ್ನು ಆರೋನನ ಸಂತತಿಯ ಯಾಜಕರಿಗೆ ಪೀಠಕಾಣಿಕೆಯಾಗಿ ಕೊಡುತ್ತಿದ್ದೆ. 7ಜೆರುಸಲೇಮಿನಲ್ಲಿ ಸೇವೆಸಲ್ಲಿಸುತ್ತಿದ್ದ ಲೇವಿಯರಿಗೆ ದ್ರಾಕ್ಷಾರಸ, ದವಸಧಾನ್ಯಗಳು, ಓಲಿವ್ ಎಣ್ಣೆ, ದಾಳಿಂಬೆ ಮತ್ತಿತರ ಹಣ್ಣುಗಳ ದಶಮಾಂಶವನ್ನು ಕೊಡುತ್ತಿದ್ದೆ. ಅದಲ್ಲದೆ, ದಶಮಾಂಶದ ಮತ್ತೊಂದು ಭಾಗವನ್ನು ಮಾರಿ ಅದರಿಂದ ಬಂದ ಹಣವನ್ನು, ಸಬ್ಬತ್ ವರ್ಷವನ್ನು ಬಿಟ್ಟು, ಪ್ರತಿವರ್ಷವೂ ಜೆರುಸಲೇಮಿನಲ್ಲೇ ಹಂಚಿಕೊಡುತ್ತಿದ್ದೆ.

8 ಮೂರು ವರ್ಷಕ್ಕೊಮ್ಮೆ ದಶಮಾಂಶದ ಮೂರನೇ ಭಾಗವನ್ನು ವಿಧವೆಯರಿಗೆ, ಅನಾಥರಿಗೆ ಹಾಗೂ ಮತಾಂತರಗೊಂಡು ಇಸ್ರಯೇಲ್ ಜನರ ನಡುವೆ ನೆಲೆಸಿದ್ದವರಿಗೆ ದಾನಮಾಡುತ್ತಿದ್ದೆ. ಮೋಶೆಯ ನಿಯಮಾನುಸಾರು ಹಾಗು ನನ್ನ ಪೂರ್ವಜಳೂ ನನ್ನ ತಂದೆ ತೊಬಿಯೇಲನ ತಾಯಿಯೂ ಆದ ದೆಬೋರಳ ಆದೇಶದ ಪ್ರಕಾರ ಅವರೊಡನೆ ಸೇರಿ ಊಟಮಾಡುತ್ತಿದ್ದೆ. ನನ್ನ ತಂದೆಯ ಮರಣದ ನಂತರ ನಾನು ಸಹ ಅನಾಥನಾಗಿದ್ದೆ.

## ಗಡೀಪಾರಿನ ಸಮಯದಲ್ಲೂ ಕರ್ತವ್ಯನಿಷ್ಠೆ

9 ನನಗೆ ವಯಸ್ಸಾದಾಗ ನನ್ನ ಕುಲದವಳೇ ಆದ ಅನ್ನಾ ಎಂಬಾಕೆಯನ್ನು ವಿವಾಹಮಾಡಿಕೊಂಡೆ. ಅವಳಿಂದ ಒಬ್ಬ ಮಗನನ್ನು ಪಡೆದು, ಅವನಿಗೆ ತೊಬಿಯಾಸ್ ಎಂದು ನಾಮಕರಣ ಮಾಡಿದೆ. 10ಅನಂತರ ಅಸ್ಸೀರಿಯಕ್ಕೆ ಗಡೀಪಾರಾಗಿ ಬಂದು ನಿನೆವೆಯಲ್ಲಿ ವಾಸಮಾಡತೊಡಗಿದೆ.

ನಾನು ನಿನೆವೆಯಲ್ಲಿದ್ದಾಗ ನನ್ನ ಬಂಧು ಬಳಗದವರು ಹಾಗು ನನ್ನ ಕುಲಸ್ಥರು ಅನ್ಯಧರ್ಮೀಯರ ಆಹಾರವನ್ನೇ ಭುಜಿಸುತ್ತಿದ್ದರು. 11ಆದರೆ ನಾನು ಮಾತ್ರ ಆ ಆಹಾರವನ್ನು ಮುಟ್ಟುತ್ತಿರಲಿಲ್ಲ. 12ನಾನು ಮನಃಪೂರ್ವಕವಾಗಿ ದೇವರಲ್ಲಿ ಭಯಭಕ್ತಿಯುಳ್ಳವನಾಗಿದ್ದೆ. 13ಆ ಮಹೋನ್ನತ ದೇವರು ಶಲ್ಮನಸೇರ್ ರಾಜನ ಗೌರವಾದಾರಗಳಿಗೆ ನಾನು ಪಾತ್ರನಾಗುವಂತೆ ಮಾಡಿದ್ದರು. ರಾಜ ತನಗೆ ಬೇಕಾದ ಸಾಮಾನುಗಳನ್ನು ಸರಬರಾಯಿ ಮಾಡಲು ನನ್ನನ್ನು ನೇಮಿಸಿಕೊಂಡಿದ್ದನು.

14 ಅರಸನ ಮರಣದವರೆಗೆ, ಮೇದ್ಯನಾಡಿಗೆ ಹೋಗಿ ಅರಸನಿಗೆ ಅವಶ್ಯಕವಾದ ಸರಕು–ಸಾಮಾಗ್ರಿಗಳನ್ನು ತರುವ ರೂಢಿ ಇತ್ತು. ಒಮ್ಮೆ ಮೇದ್ಯ ನಾಡಿನ ರಾಜೆಸ್ ಎಂಬ ಪಟ್ಟಣದಲ್ಲಿ ಇದ್ದಾಗ

ಕೆಲವು ಹಣದ ಚೀಲಗಳನ್ನು ಗಬ್ರಿಯಾಸನ ಸಹೋದರನಾದ ಗಬಯೇಲನ ಬಳಿ ಬಿಟ್ಟು ಅವುಗಳನ್ನು ನನಗೋಸ್ಕರ ಭದ್ರವಾಗಿ ಇಟ್ಟುಕೊಳ್ಳಬೇಕೆಂದು ಕೇಳಿಕೊಂಡೆ. ಅದರಲ್ಲಿ 300 ಕಿಲೋಗ್ರಾಂಗಿಂತ ಹೆಚ್ಚು ಬೆಳ್ಳಿನಾಣ್ಯಗಳು ಇದ್ದವು. 15ಶಲ್ಮನಸೇರ್ ಅರಸನು ಸತ್ತಾಗ ಅವನ ಮಗ ಸೆನ್ಹೇರೀಬನು ಪಟ್ಟಕ್ಕೆ ಬಂದನು. ಆಗ ಮೇದ್ಯ ನಾಡಿನ ರಸ್ತೆಗಳು ಸುರಕ್ಷಿತವಾಗಿರಲಿಲ್ಲ. ಆದುದರಿಂದ ಅಲ್ಲಿಗೆ ಹೋಗಲು ನನಗೆ ಸಾಧ್ಯವಾಗಲಿಲ್ಲ.

### ಸತ್ತವರಿಗೆ ಶವಸಂಸ್ಕಾರ

16 ಶಲ್ಮನಸೇರನ ಕಾಲದಲ್ಲಿ ನನ್ನ ಕುಲಸ್ಥರಾದ ಯೆಹೂದ್ಯರಿಗೆ ಹಲವಾರು ಬಾರಿ ದಾನಧರ್ಮ ಮಾಡುತ್ತಿದ್ದೆ. 17ಹಸಿದವರಿಗೆ ನನ್ನ ಆಹಾರವನ್ನೇ, ಬಟ್ಟೆಯಿಲ್ಲದವರಿಗೆ ನನ್ನ ಬಟ್ಟೆಯನ್ನೇ ಕೊಡುತ್ತಿದ್ದೆ. ನನ್ನ ಕುಲದವರ ಯಾರದೇ ಪಾರ್ಥಿವ ಶರೀರ ನಿನೆವೆ ಪಟ್ಟಣದ ಗೋಡೆಯ ಹೊರಗೆ ಬಿದ್ದಿರುವುದನ್ನು ಕಂಡಾಗ, ನಾನು ಅದನ್ನು ಸಮಾಧಿಮಾಡುತ್ತಿದ್ದೆ.

18 ಸೆನ್ಹೇರೀಬನಿಂದ ಹತರಾದವರನ್ನೂ ನಾನು ಸಮಾಧಿಮಾಡುತ್ತಿದ್ದೆ. ಪರಲೋಕದ ಅರಸರಾದ ದೇವರನ್ನು ಶಪಿಸಿದ್ದಕ್ಕಾಗಿ ಸೆನ್ಹೇರೀಬನಿಗೆ ದೇವರ ಶಿಕ್ಷೆಯಾಯಿತು. ಅವನು ಜುದೇಯ ನಾಡಿನಿಂದ ಹಿಮ್ಮೆಟ್ಟಬೇಕಾಯಿತು. ಆ ಸಂದರ್ಭದಲ್ಲಿ ಅವನು ಕೋಪದಿಂದ ಅನೇಕ ಇಸ್ರಯೇಲರನ್ನು ಕೊಂದುಹಾಕಿದನು. ಹೀಗೆ ಮೃತರಾದವರ ಶವಗಳನ್ನು ರಹಸ್ಯವಾಗಿ ಎತ್ತಿಕೊಂಡು ಹೋಗಿ ಸಮಾಧಿಮಾಡಿದೆ. ಸೆನ್ಹೇರೀಬನು ಆ ಶವಗಳನ್ನು ಹುಡುಕಿದಾಗ ಅವನಿಗೆ ಅವು ಕಾಣಸಿಗಲಿಲ್ಲ.

19 ಆಗ ನಿನೆವೆಯ ನಿವಾಸಿಯೊಬ್ಬನು ಅರಸ ಸೆನ್ಹೇರೀಬನ ಬಳಿಗೆ ಹೋಗಿ, ಶವಗಳನ್ನು ಸಮಾಧಿಮಾಡುತ್ತಿದ್ದವನು ನಾನೇ ಎಂದು ತಿಳಿಸಿದನು. ನನ್ನ ಬಗ್ಗೆ ರಾಜನಿಗೆ ಸಮಾಚಾರ ತಿಳಿದು ಹೋಯಿತೆಂದು ನನಗೆ ಮನದಟ್ಟಾಯಿತು. ನನ್ನನ್ನು ಕೊಲ್ಲಲು ಆತನ ಜನರು ಹವಣಿಸುತ್ತಿದ್ದಾರೆಂದೂ ತಿಳಿದುಬಂತು. ನಾನು ಭಯದಿಂದ ಓಡಿಹೋಗಿ ಅವಿತುಕೊಂಡೆ. 20ನನ್ನ ಆಸ್ತಿಗೆಲ್ಲ ಮುಟ್ಟುಗೋಲು ಹಾಕಿ, ರಾಜ್ಯ ಬೊಕ್ಕಸಕ್ಕೆ ಸೇರಿಸಲಾಯಿತು. ನನ್ನ ಪತ್ನಿ ಅನ್ನಾ ಮತ್ತು ನನ್ನ ಮಗ ತೊಬಿಯಾಸ್ ಇವರ ಹೊರತು ಮತ್ತೇನೂ ನನಗಿರಲಿಲ್ಲ.

### ಸೋದರಳಿಯನಿಂದ ಸಹಾಯ

21 ಇದಾದ ನಾಲ್ವತ್ತು ದಿನಗಳಾಗುವಷ್ಟರಲ್ಲಿ ಸೆನ್ಹೇರೀಬನ ಮಕ್ಕಳಿಬ್ಬರು ಅವನನ್ನು ಹತ್ಯೆಮಾಡಿ ಅರಾರಾತಿನ ಬೆಟ್ಟಕ್ಕೆ ಪಲಾಯನ ಮಾಡಿದರು. ಅವನ ನಂತರ ಅವನ ಮಗ ಎಸಾರದ್ದೋನ್ ಅರಸನಾದ. ನನ್ನ ಸಹೋದರ ಅನಯೇಲನ ಮಗ ಅಹೀಕರನನ್ನು ರಾಜ್ಯ ಬೊಕ್ಕಸಕ್ಕೆ ಮುಖ್ಯಾಧಿಕಾರಿಯನ್ನಾಗಿ ನೇಮಿಸಲಾಯಿತು. ಅಲ್ಲದೆ ಮುಖ್ಯ ವಿಷಯಗಳ ವಹಿವಾಟನ್ನು ಅವನಿಗೆ ವಹಿಸಲಾಯಿತು. 22ಈ ಮೊದಲು ಅಹೀಕರನು ಅಸ್ಸೀರಿಯದ ಅರಸ ಸೆನ್ಹೇರೀಬನ ಅಧೀನದಲ್ಲಿ ಮುಖ್ಯಪಾನಸೇವಕ, ಮುದ್ರಾಧಿಕಾರಿ, ಗೃಹನಿರ್ವಾಹಕ ಮತ್ತು ಖಜಾಂಚಿ ಆಗಿದ್ದನು. ಆದ್ದರಿಂದ ಅವನು ನನ್ನ ಪರವಾಗಿ ಅರಸನನ್ನು ಮನವಿ ಮಾಡಿಕೊಂಡ ಕಾರಣ, ನಿನೆವೆಗೆ ಹಿಂದಿರುಗಲು ಅಪ್ಪಣೆ ದೊರಕಿತು. ಅಹೀಕರನು ನನ್ನ ಬಂಧು ಹಾಗು ಸೋದರಳಿಯ.

### ಕುಟುಂಬದ ಔತಣಕೂಟ

**2** ಎಸಾರದ್ದೋನ್ ಅರಸನಾಗಿದ್ದಾಗಲೇ ನಾನು ಮನೆಗೆ ಹಿಂದಿರುಗಿದೆ. ಪತ್ನಿ ಅನ್ನಳು ಮತ್ತು ಮಗ ತೊಬಿಯಾಸ್ ನನ್ನೊಡನೆ ಸೇರಿಕೊಂಡರು. ಪಂಚಾಶತ್ತಮ ಹಬ್ಬದಂದು ಒಳ್ಳೆಯ ಔತಣಕೂಟವನ್ನು ಏರ್ಪಡಿಸಲಾಗಿತ್ತು. ನಾನು ಭೋಜನಕ್ಕೆ ಕುಳಿತೆ. 2ವಿವಿಧ ತಿಂಡಿತಿನಸುಗಳನ್ನು ಮೇಜಿನ ಮೇಲೆ ಬಡಿಸಲಾಗಿತ್ತು. ಆಗ ನನ್ನ ಮಗ ತೊಬಿಯಾಸನಿಗೆ, "ಮಗನೇ, ನೀನು ಹೋಗಿ ನಿನೆವೆಯಲ್ಲಿ ಗಡೀಪಾರಾಗಿರುವ ನಮ್ಮ ಸಹೋದರರಲ್ಲಿ ಯಾರಾದರು ಬಡವ ಹಾಗು ಧರ್ಮನಿಷ್ಠನು ಇದ್ದರೆ

ಅಂಥವನನ್ನು ಊಟಕ್ಕೆ ಕರೆದುಕೊಂಡು ಬಾ. ಅಂಥವನೊಂದಿಗೆ ನಾನು ಊಟ ಮಾಡಬೇಕು. ನೀನು ಹಿಂದಿರುಗಿ ಬರುವವರೆಗೂ ನಾನು ಕಾದಿರುತ್ತೇನೆ," ಎಂದೆನು.

**ನಿನೆವೆಯಲ್ಲಿ ನರಹತ್ಯೆ**

3 ಅಂತೆಯೇ, ತೊಬಿಯಾಸನು ಒಬ್ಬ ಬಡ ಇಸ್ರಯೇಲನನ್ನು ಹುಡುಕಲು ಹೊರಟನು. ಅವನು ಹಿಂದಿರುಗಿ ಬಂದು, "ಅಪ್ಪಾ, ಅಪ್ಪಾ," ಎಂದು ಕರೆದನು. ನಾನು, "ಏನು ಮಗನೇ?" ಎಂದು ಕೇಳಲು, ಅವನು, "ನಮ್ಮ ಕುಲದವರಲ್ಲಿ ಒಬ್ಬನನ್ನು ಈಗ ತಾನೇ ಹತ್ಯೆ ಮಾಡಿದ್ದಾರೆ. ಅವನ ಕೊರಳನ್ನು ಹಿಸುಕಿ ಅಂಗಡಿಬೀದಿಯಲ್ಲಿ ಬಿಸಾಡಿದ್ದಾರೆ. ಅವನು ಇನ್ನೂ ಅಲ್ಲೇ ಬಿದ್ದಿದ್ದಾನೆ," ಎಂದನು.

4 ತಕ್ಷಣ ನಾನು ಜಿಗಿದೆದ್ದು, ಭೋಜನವನ್ನು ಮುಟ್ಟದೆ ಹೊರಟೆ. ಆ ಅಂಗಡಿ ಬೀದಿಯಿಂದ ಶವವನ್ನು ಹೊತ್ತುತಂದೆ. ಸೂರ್ಯಾಸ್ತಮದ ನಂತರ ಸಮಾಧಿಮಾಡಲು ನನ್ನ ಕೊಠಡಿಯೊಂದರಲ್ಲಿ ಆ ಶವವನ್ನು ಅವಿತಿಟ್ಟೆ. 5ತರುವಾಯ ಸ್ನಾನಮಾಡಿ ದುಃಖದಿಂದ ಊಟಮಾಡಿದೆ. 6ಆಗ ಪ್ರವಾದಿ ಆಮೋಸನು ಬೇತೇಲಿನ ವಿರುದ್ಧ ನುಡಿದ ಆ ಮಾತುಗಳು ನನ್ನ ನೆನಪಿಗೆ ಬಂದವು:

"ಮಾರ್ಪಡಿಸುವೆನು ನಿಮ್ಮ ಕೊಂಡಾಟ ದಿನಗಳನ್ನು ಗೋಳಾಟದಿನಗಳನ್ನಾಗಿ, ನಿಮ್ಮ ಹರ್ಷ ಗೀತೆಗಳನ್ನು ಶೋಕಗೀತೆಗಳನ್ನಾಗಿ." ಈ ನುಡಿ ನನಗೆ ಕಣ್ಣೀರನ್ನು ತಂದಿತು.

7 ಸೂರ್ಯಾಸ್ತಮವಾದ ಮೇಲೆ ನಾನು ಹೊರಟು ಗುಳಿಯನ್ನು ತೋಡಿ ಆ ಶವವನ್ನು ಭೂಸ್ಥಾಪನೆ ಮಾಡಿದೆ. 8ನನ್ನ ನೆರೆಯವರು ಪರಿಹಾಸ್ಯ ಮಾಡುತ್ತಾ, "ಈತನಿಗೆ ಭಯಬೇಡವೆ? ಈ ಮೊದಲೇ ಇಂಥ ಕಾರ್ಯಕ್ಕಾಗಿ ಅವನು ತಲೆತೆತ್ತಬೇಕಾಗಿತ್ತು; ಪಲಾಯನಮಾಡಬೇಕಾಗಿತ್ತು. ಆದರೂ ಪುನಃ ಸತ್ತವರನ್ನು ಸಮಾಧಿ ಮಾಡಲು ಪ್ರಾರಂಭಿಸಿದ್ದಾನೆ," ಎಂದುಕೊಂಡರು.

**ಕುರುಡನಾದ ತೊಬೀತ್**

9 ಅದೇ ರಾತ್ರಿ ಸ್ನಾನಮಾಡಿಕೊಂಡು ನನ್ನ ಅಂಗಳದ ಗೋಡೆಯ ಪಕ್ಕದಲ್ಲೇ ಮಲಗಿಕೊಂಡೆ. ಸೆಕೆಯಾಗಿದ್ದರಿಂದ ಮುಖವನ್ನು ಮುಚ್ಚಿಕೊಳ್ಳಲಿಲ್ಲ. 10ತಲೆಯ ಮೇಲ್ಭಾಗದ ಗೋಡೆಯಲ್ಲಿ ಗುಬ್ಬಚ್ಚಿಗಳಿದ್ದವೆಂದು ನನಗೆ ತಿಳಿದಿರಲಿಲ್ಲ. ಅವುಗಳ ಬಿಸಿಬಿಸಿ ಪಿಚ್ಚಿಕೆಗಳು ಕಣ್ಣುಗಳಿಗೆ ಬಿದ್ದವು. ಕಣ್ಣುಗಳ ಮೇಲೆ ಬಿಳಿಮಚ್ಚೆಗಳು ಉಂಟಾದವು. ಚಿಕಿತ್ಸೆಗಾಗಿ ವೈದ್ಯರ ಬಳಿಗೆ ಹೋದೆ. ಮುಲಾಮುಗಳಿಂದ ಅದನ್ನು ಗುಣಪಡಿಸಲು ಅವರು ಪ್ರಯತ್ನಿಸಿದಷ್ಟೂ ನನ್ನ ದೃಷ್ಟಿ ಕಡಿಮೆಯಾಯಿತು. ಕೊನೆಗೆ ನಾನು ಸಂಪೂರ್ಣವಾಗಿ ಕುರುಡನಾದೆ. ನಾಲ್ಕು ವರ್ಷಗಳ ಕಾಲ ದೃಷ್ಟಿಯಿಲ್ಲದೆ ಇದ್ದೆ. ನನ್ನ ಬಂಧುಬಳಗದವರೆಲ್ಲ ನನ್ನ ಬಗ್ಗೆ ಅನುಕಂಪ ತಾಳಿದ್ದರು. ಅಹೀಕರನು ಎಲಾಮಿಯಸಿಗೆ ಹೋಗುವತನಕ ಎರಡು ವರ್ಷಕಾಲ ನನಗೆ ಜೀವನಾಂಶವನ್ನು ಒದಗಿಸಿ ಕೊಟ್ಟನು.

**ಕುಟುಂಬದಲ್ಲಿ ಕಲಹ**

11 ಅಹೀಕರನು ಹೊರಟುಹೋದ ತರುವಾಯ ನನ್ನ ಪತ್ನಿ ಅನ್ನಾ ದುಡಿಯಬೇಕಾಗಿ ಬಂತು. ಅವಳು ಉಣ್ಣೆಯಿಂದ ನೂಲುತೆಗೆದು ಬಟ್ಟೆಯನ್ನು ನೇಯುತ್ತಿದ್ದಳು. ಕ್ರಯಮಾಡಿದವರಿಗೆ ಬಟ್ಟೆಯನ್ನು ತಲುಪಿಸಿ ಅವರಿಂದ ಹಣಪಡೆಯುತ್ತಿದ್ದಳು. 12ಡಿಸ್ಟ್ರೋಸ್ ತಿಂಗಳ ಏಳನೆಯ ದಿನದಂದು ತಾನೇ ನೆಯ್ದ ಬಟ್ಟೆಯ ತುಂಡೊಂದನ್ನು ಗೊತ್ತುಮಾಡಿದವರಿಗೆ ಕೊಟ್ಟಳು. ಅವರು ಅದಕ್ಕೆ ಪೂರ್ತಿ ಹಣವನ್ನು ಪಾವತಿ ಮಾಡಿದ್ದಲ್ಲದೆ ಊಟಕ್ಕೆಂದು ಒಂದು ಮೇಕೆಯನ್ನು ಸಹ ಕೊಡುಗೆಯಾಗಿ ಕೊಟ್ಟರು.

13 ಆ ಮೇಕೆ ಮನೆಗೆ ಬಂದಾಗ ಅರಚಲು ಆರಂಭಿಸಿತು. ಆಗ ನನ್ನಾಕೆಯನ್ನು ಕರೆದು, "ಈ ಮೇಕೆ ಎಲ್ಲಿಂದ ಬಂತು? ಇದು ಕದ್ದು ತಂದ ಮೇಕೆಯಲ್ಲ ತಾನೇ? ಕದ್ದವಸ್ತುವನ್ನು ತಿನ್ನಲು ನಮಗೆ ಹಕ್ಕಿಲ್ಲ. ಇದನ್ನು ಮಾಲೀಕರಿಗೆ ಹಿಂದಿರುಗಿಸು," ಎಂದು ಹೇಳಿದೆ.

14 ಆದರೆ ಆಕೆ, "ಇಲ್ಲ, ನನ್ನ ಕೂಲಿಗಿಂತ ಹೆಚ್ಚಾಗಿ ಇದನ್ನು ಕೊಡುಗೆಯಾಗಿ ನನಗೆ ಕೊಟ್ಟರು," ಎಂದು ಹೇಳಿದಳು. ನಾನು ಆಕೆಯನ್ನು ನಂಬಲಿಲ್ಲ. ಮಾಲೀಕರಿಗೆ ಅದನ್ನು ಹಿಂದಿರುಗಿಸಬೇಕೆಂದು ಒತ್ತಾಯ

ಮಾಡಿದೆ. ಅವಳ ನಡತೆಯ ವಿಷಯದಲ್ಲಿ ನನಗೆ ತೀವ್ರ ನಾಚಿಕೆಯಾಯಿತು. ಅದಕ್ಕವಳು, "ನಿನ್ನ ದಾನಧರ್ಮ ಏನಾಯಿತು? ನಿನ್ನ ಸತ್ಕಾರ್ಯಗಳಿಂದ ಏನು ಬಂತು? ಅವುಗಳಿಂದ ನಿನಗೆ ಲಭಿಸಿದ ಪ್ರತಿಫಲ ಎಲ್ಲರಿಗೂ ಗೊತ್ತಾದ ವಿಷಯ!" ಎಂದು ಜರೆದಳು.

### ತೊಬೀತನ ಪ್ರಾರ್ಥನೆ

**3** ಆಗ ನಾನು ವ್ಯಸನಾಕ್ರಾಂತನಾದೆ. ನಿಟ್ಟುಸಿರಿಟ್ಟೆ. ಅತ್ತು ಪ್ರಲಾಪಿಸುತ್ತಾ ಹೀಗೆಂದು ಪ್ರಾರ್ಥನೆ ಮಾಡಿದೆ:

2 ಹೇ ಸರ್ವೇಶ್ವರಾ, ನೀನು ನ್ಯಾಯಸ್ವರೂಪಿ:
ಜಗತ್ತಿಗೆಲ್ಲ ನ್ಯಾಯಾಧಿಪತಿ:
ನಿನ್ನ ಕಾರ್ಯಗಳೆಲ್ಲ ನ್ಯಾಯಸಮ್ಮತ
ನಿನ್ನ ಮಾರ್ಗಗಳೆಲ್ಲ ಸತ್ಯ ಹಾಗೂ
ದಯಾಪೂರಿತ.
3 ಸರ್ವೇಶ್ವರಾ, ತಂದುಕೊ ನನ್ನನ್ನೀಗ ನೆನಪಿಗೆ
ಕರುಣೆ ತೋರೆನಗೆ.
ದಂಡಿಸಬೇಡ ನನ್ನ ಪಾಪಗಳಿಗಾಗಿ
ಅರಿಯದೆ ಮಾಡಿದ ತಪ್ಪು ನೆಪ್ಪುಗಳಿಗಾಗಿ
ನನ್ನ ಪೂರ್ವಜರ ಪಾಪದೋಷಗಳಿಗಾಗಿ.
4 ನಿನ್ನ ಕಟ್ಟಳೆಗಳನ್ನು ಮೀರಿದೆವು
ನಿನಗೆ ದ್ರೋಹವೆಸಗಿ ಪಾಪಮಾಡಿದೆವು;
ಎಂದೇ ನಮ್ಮನ್ನೊಪ್ಪಿಸಿದೆ ಸೂರೆಗೆ,
ಸೆರೆಗೆ, ಸಾವಿಗೆ
ಚದರಿಸಿದೆ ಅನ್ಯಜನಾಂಗಗಳ ಈ ನಾಡಿಗೆ
ಗುರಿಪಡಿಸಿದೆ ಇಲ್ಲಿನವರ ನಿಂದೆಪರಿಹಾಸ್ಯಕೆ.
5 ನಿನ್ನ ನಿರ್ಣಯಗಳೆಲ್ಲ ನ್ಯಾಯಯುತ
ನನಗೂ ಪೂರ್ವಜರಿಗೂ ನೀನಿತ್ತ ಶಿಕ್ಷೆ ಸೂಕ್ತ
ಪಾಲಿಸಲಿಲ್ಲ ನಾವು ನಿನ್ನ ಆಜ್ಞೆಗಳನು
ಕೈಗೊಳ್ಳಲಿಲ್ಲ ನಿನ್ನ ಸನ್ಮಾರ್ಗಗಳನು.
6 ನಡೆಸೆನ್ನನೀಗ ನಿನ್ನ ಚಿತ್ತದ ಪ್ರಕಾರ
ಬೇಕಾದರೆ ತೆಗೆದುಬಿಡು ಎನ್ನ ಪ್ರಾಣ.
ಆಗ ತೆರಳುವೆ ನಾ ಜಗದಿಂದ ಮರೆಯಾಗಿ
ಮರಳುವೆ ಧರೆಗೆ ಮಣ್ಣಾಗಿ.
ಆಪಾದನೆಗಳನ್ನು ಕೇಳಿ ಸಾಕಾಗಿದೆ
ದುಃಖಸಾಗರದಲ್ಲಿ ನಾ ಮುಳುಗಿರುವೆ.
ನನಗೆ ಜೀವಕ್ಕಿಂತ ಸಾವೇ ಮೇಲಾಗಿದೆ.
ಹೇ ಸರ್ವೇಶ್ವರಾ, ನೀಡೆನಗೆ ವಿಮೋಚನೆ
ನಾನು ಸೇರಮಾಡು ಅಮರ ನಿವಾಸಕೆ.
ಓ ಸರ್ವೇಶ್ವರಾ, ವಿಮುಖನಾಗಬೇಡ ನನಗೆ.
ಈ ಜೀವನದ ಕಷ್ಟಸಂಕಟಗಳ ಸಹಿಸುವುದಕ್ಕಿಂತ
ಕ್ರೂರನಿಂದೆ ದೂಷಣೆಗಳ ಕೇಳುವುದಕ್ಕಿಂತ
ಸಾವೇ ಲೇಸು ನನಗೆ ಈ ಎಲ್ಲಕ್ಕಿಂತ.

## ಸಾರಳ ಸಂಕಷ್ಟಗಳು

7 ಮೇದ್ಯ ನಾಡಿನ ಎಕ್‍ಬತಾನ ಎಂಬ ನಗರದಲ್ಲಿ ರಾಗುಯೇಲನ ಮಗಳು ಸಾರಾ ಎಂಬಾಕೆ ಇದ್ದಳು. ಅದೇ ದಿನದಂದು ಸಾರಳಿಗೆ ತನ್ನ ತಂದೆಯ ಸೇವಕಿಯೊಬ್ಬಳಿಂದ ಅಕಸ್ಮಾತ್ತಾಗಿ ನಿಂದೆ ದೂಷಣೆಗಳನ್ನು ಕೇಳಿಸಿಕೊಂಡಳು. 8ಸಾರಳಿಗೆ ಏಳುಸಾರಿ ವಿವಾಹವಾಗಿತ್ತು. ದೆವ್ವಗಳಲ್ಲೆಲ್ಲ ಅತೀ ದುಷ್ಟನಾದ ಆಸ್ಮೋದೇಯುಸ್ ಆಕೆಯ ಏಳು ಗಂಡಂದಿರನ್ನು ಒಬ್ಬರಾದ ಮೇಲೆ ಒಬ್ಬರನ್ನು ಆಕೆಯೊಂದಿಗೆ ಕೂಡಿ ಬಾಳುವುದಕ್ಕೆ ಮುಂಚೆಯೆ, ಕೊಂದುಹಾಕಿದ್ದನು. ಒಂದು ಬಾರಿ ಆ ಸೇವಕಿ ಸಾರಾಳಿಗೆ, “ಗಂಡಂದಿರ ಕೊಲೆಗಡುಕಿ ನೀನು; ಈಗಾಗಲೇ ಏಳು ಮಂದಿಯನ್ನು ಮದುವೆ ಆದೆ; ಒಬ್ಬನಿಂದಲೂ ಮಕ್ಕಳನ್ನು ಪಡೆಯದಷ್ಟು ನತದೃಷ್ಟಳು; 9ಗಂಡಂದಿರನ್ನು ಕಳೆದುಕೊಂಡ ಕೋಪವನ್ನು ನಮ್ಮ ಮೇಲೆ ಏಕೆ ಕಾರುತ್ತೀಯೆ? ಬೇಕಾದರೆ ಹೋಗಿ ಸತ್ತ ಗಂಡಂದಿರೊಂದಿಗೆ ಸೇರಿಕೊ. ನನ್ನ ಕಣ್ಣಿಗೆ ಎಂದೂ ನಿನ್ನ ಮಗ ಬೀಳದಿರಲಿ,” ಎಂದು ಶಪಿಸಿದಳು.

10 ಇದನ್ನು ಕೇಳಿ, ಸಾರಳಿಗೆ ತೀವ್ರ ದುಃಖ ಉಂಟಾಯಿತು. ಆಕೆ ಅತ್ತು ಪ್ರಲಾಪಿಸಿದಳು. ಕುತ್ತಿಗೆಗೆ ನೇಣುಹಾಕಿಕೊಳ್ಳಲು ತಂದೆಯ ಕೊಠಡಿಗೆ ಹೋದಳು. ಆದರೆ ಆಕೆಗೆ ಒಂದು ಯೋಚನೆ ಹೊಳೆಯಿತು. ಬಹುಶಃ ಅವರು ನನ್ನ ತಂದೆಯನ್ನು ದೂಷಿಸಬಹುದು: “ನಿನ್ನ ಅಚ್ಚು ಮೆಚ್ಚಿನ ಮಗಳೊಬ್ಬಳೇ ದುಃಖದಿಂದ ನೇಣು ಹಾಕಿಕೊಂಡಳು” ಎಂದು ಜರೆಯಬಹುದು. ಇಂಥ ಚುಚ್ಚುಮಾತನ್ನು ಕೇಳಿದೊಡನೆ ನನ್ನ ವಯೋವೃದ್ಧ ತಂದೆ ಮೃತ್ಯುಲೋಕವನ್ನು ಸೇರಬಹುದು. ಆದುದರಿಂದ ನಾನೀಗ ನೇಣುಹಾಕಿಕೊಳ್ಳದಿರುವುದು ಲೇಸು. ಬದಲಿಗೆ ಸರ್ವೇಶ್ವರನೇ ಮರಣವನ್ನು ಕೊಡಲೆಂದು ಪ್ರಾರ್ಥಿಸುವೆ. ಆಗ ಇಂಥ ದೂಷಣೆಗಳನ್ನು ಕೇಳಲು ಅವಕಾಶ ಇರದು ಎಂದುಕೊಂಡಳು.

## ಸಾರಳ ಪ್ರಾರ್ಥನೆ

11 ಅಂತೆಯೇ ಸಾರಳು ಕಿಟಕಿಯ ಬಳಿ ನಿಂತು ಕೈಗಳನ್ನು ಮೇಲಕ್ಕೆತ್ತಿ ಹೀಗೆಂದು ಪ್ರಾರ್ಥಿಸಿದಳು:
ಕರುಣಾಳು ದೇವಾ, ನಿನಗೆ ಸ್ತುತಿಸ್ತೋತ್ರ
ನಿನ್ನ ನಾಮ ಎಂದೆಂದಿಗೂ ಪೂಜಿತ
ಸೃಷ್ಟಿಸಮಸ್ತವು ನಿನ್ನನು ಸ್ತುತಿಸಲಿ ಸತತ.
12 ನಾನೀಗ ನಿನಗೆ ಅಭಿಮುಖಳಾಗಿರುವೆ
ನನ್ನ ದೃಷ್ಟಿಯನು ನಿನ್ನಲೇ ನಾಟಿರುವೆ.
13 ಧರೆಯಿಂದ ನಾ ಮರೆಯಾಗುವಂತೆ
ಮಾಡಲಿ ನಿನ್ನ ನುಡಿ
ಬೇಸತ್ತು ಹೋಗಿರುವೆ ನಿಂದೆದೂಷಣೆಗಳನು
ಕೇಳಿ,
14 ಸರ್ವೇಶ್ವರಾ, ನೀನರಿವೆ ನಾನಿನ್ನೂ
ಅಬಲೆಯೆಂದು
ಯಾವನೋರ್ವನ ಪುರುಷ ಸಂಪರ್ಕ
ನನಗಿಲ್ಲವೆಂದು.
15 ನಾ ಕೆಡಿಸಿಕೊಂಡಿಲ್ಲ ಈ ಹೊರನಾಡಲಿ
ನಿನ್ನ ಶ್ರೀನಾಮವನ್ನಾಗಲೀ
ನನ್ನ ತಂದೆಯ ಹೆಸರನ್ನಾಗಲೀ.
ನನ್ನ ತಂದೆಗೆ ನಾನೊಬ್ಬಳೇ ಕುವರಿ
ಆತನಿಗಿಲ್ಲ ಯಾರೊಬ್ಬ ಉತ್ತರಾಧಿಕಾರಿ.
ಆತನಿಗೆ ಉಳಿದಿಲ್ಲ ನೆಂಟರಿಷ್ಟರಾರೂ
ನಾನವನೊಡನೆ ವಿವಾಹ ಮಾಡಿಕೊಳ್ಳಲು.

ಏಳು ಗಂಡಂದಿರನ್ನು ಕಳೆದುಕೊಂಡಿರುವೆ
ಈಗಾಗಲೇ
ನಾನೇಕೆ ಬದುಕಬೇಕು ಇನ್ನು ಮೇಲೆ?
ನಾ ಸಾಯುವುದು ನಿನಗಿಷ್ಟವಿಲ್ಲವಾದರೆ
ಹೇ ಸರ್ವೇಶ್ವರಾ, ತೋರೆನಗೆ ಕರುಣೆ
ನಾನಿನ್ನು ಕೇಳಲಾರೆ ದೋಷಾರೋಪಣೆ.

**ಪ್ರಾರ್ಥನೆಗಳಿಗೆ ದೇವರ ಪ್ರತ್ಯುತ್ತರ**

16 ತೊಬೀತನ ಮತ್ತು ಸಾರಳ ಪ್ರಾರ್ಥನೆ ಮಹಿಮಾನ್ವಿತ ದೇವರ ಸನ್ನಿಧಿಗೆ ಮುಟ್ಟಿತು.
17ಅವರಿಬ್ಬರನ್ನೂ ಗುಣಪಡಿಸಲು ದೇವರು ರಫಯೇಲ್ ಎಂಬವನನ್ನು ಕಳುಹಿಸಿದರು. ತೊಬೀತನು ತನ್ನ ಕಣ್ಣುಗಳಿಂದ ದೇವರ ಜ್ಯೋತಿಯನ್ನು ನೋಡಲು ಸಾಧ್ಯವಾಗುವಂತೆ ಅವನ ಕಣ್ಣುಗಳ ಮಚ್ಚೆಗಳನ್ನು ತೆಗೆಯಬೇಕಾಗಿತ್ತು. ರಾಗುಯೇಲನ ಮಗಳು ಸಾರಳನ್ನು ತೊಬೀತನ ಮಗ ತೊಬಿಯಾಸನಿಗೆ ವಿವಾಹ ಮಾಡಿಕೊಡಬೇಕಾಗಿತ್ತು. ಮಾತ್ರವಲ್ಲ, ದೆವ್ವಗಳಲ್ಲೆಲ್ಲ ಅತೀ ದುಷ್ಟನಾದ ಆಸ್ಮೋದೇಯುಸ್ ದೆವ್ವವನ್ನು ಆಕೆಯಿಂದ ತೊಲಗಿಸಬೇಕಾಗಿತ್ತು. ಸಾರಳನ್ನು ಮದುವೆಯಾಗಲು ಬೇರೆಯವರಿಗಿಂತಲೂ ತೊಬಿಯಾಸನಿಗೆ ಹಕ್ಕುಬಾಧ್ಯತೆ ಇತ್ತು. ತೊಬೀತನು ಹೊರಾಂಗಣದಿಂದ ಮನೆಯೊಳಕ್ಕೆ ಹೋದನು. ಅದೇ ಸಮಯದಲ್ಲಿ ರಾಗುಯೇಲನ ಮಗಳಾದ ಸಾರಳು ಮಹಡಿಯ ಕೊಠಡಿಯಿಂದ ಇಳಿದು ಬಂದಳು.

**ತೊಬಿಯಾಸನಿಗೆ ತೊಬೀತನ ಬುದ್ಧಿವಾದ**

**4** ಅದೇ ದಿನ, ಮೇದ್ಯನಾಡಿನ ರ್‍ಹಾಜೆಸ್ ಪಟ್ಟಣದಲ್ಲಿ ಗಬಯೇಲನ ಬಳಿ ಕೊಟ್ಟು ಇಟ್ಟಿದ್ದ ಬೆಳ್ಳಿನಾಣ್ಯವನ್ನು ತೊಬೀತನು ನೆನಪಿಗೆ ತಂದುಕೊಂಡನು. 2"ಸಾವಿಗಾಗಿ ಪ್ರಾರ್ಥಿಸುವ ಸಮಯ ಬಂದಿದೆ. ನನ್ನ ಮಗ ತೊಬಿಯಾಸನನ್ನು ಕರೆದು, ಹಣದ ವಿಷಯವನ್ನು ಕುರಿತು, ಅವನಿಗೆ ಸಾಯುವುದಕ್ಕೆ ಮುಂಚೆ ತಿಳಿಸುವುದು ಉಚಿತ," ಎಂದು ಆಲೋಚಿಸಿದನು.

3 ಆದುದರಿಂದ ತೊಬಿಯಾಸನನ್ನು ಕರೆದು, "ಮಗನೇ, ನಾನು ಸತ್ತಾಗ ಗೌರವಾರ್ಹ ಶವಸಂಸ್ಕಾರ ನಡೆಸು. ನಿನ್ನ ತಾಯಿಯನ್ನು ಸನ್ಮಾನಿಸು. ಅವಳ ಜೀವಮಾನ ಕಾಲದಲ್ಲೆಲ್ಲ ಕೈಬಿಡದೆ ನೋಡಿಕೊ. ಅವಳು ಅಪೇಕ್ಷಿಸುವುದನ್ನೆಲ್ಲ ನೆರವೇರಿಸು. ಯಾವ ಕಾರಣದಿಂದಲೂ ಅವಳ ಮನಸ್ಸನ್ನು ನೋಯಿಸಬೇಡ. 4ನೀನು ಅವಳ ಗರ್ಭದಲ್ಲಿದ್ದಾಗ ನಿನಗೋಸ್ಕರ ಆಕೆ ಅನುಭವಿಸಿದ ಕಷ್ಟಸಂಕಟಗಳನ್ನೆಲ್ಲ ನೆನೆಸಿಕೊ. ಆಕೆ ಮರಣಹೊಂದಿದಾಗ, ನನ್ನ ಪಕ್ಕದಲ್ಲೇ ಸಮಾಧಿ ಮಾಡು.

5 "ಮಗನೇ, ನಿನ್ನ ಜೀವಮಾನಕಾಲದಲ್ಲಿ ಸರ್ವೇಶ್ವರನಿಗೆ ಪ್ರಾಮಾಣಿಕನಾಗಿ ನಡೆ. ಪಾಪ ಮಾಡುವುದಕ್ಕಾಗಲೀ, ಅವರ ಆಜ್ಞೆಗಳನ್ನು ಮೀರುವುದಕ್ಕಾಗಲೀ ಒಪ್ಪಬೇಡ. ಜೀವಮಾನ ಕಾಲದಲ್ಲೆಲ್ಲ ಸತ್ಕಾರ್ಯಗಳನ್ನು ಮಾಡು. ದುರ್ಮಾರ್ಗದಲ್ಲಿ ಕಾಲಿಡಬೇಡ. 6ಸತ್ಯವಂತನಾಗಿ ನೀನು ನಡೆದರೆ ಸಜ್ಜನರಿಗೆ ಆಗುವಂತೆ ನೀನೂ ಎಲ್ಲದರಲ್ಲೂ ಯಶಸ್ವಿಯಾಗುವೆ.

7 "ನಿನ್ನ ಆಸ್ತಿಯಿಂದ ದಾನಧರ್ಮ ಮಾಡು, ಹಾಗೆ ಮಾಡುವಾಗ ಗೊಣಗುಟ್ಟಬೇಡ. ಬಡ ಬಗ್ಗರಿಗೆ ವಿಮುಖನಾಗಬೇಡ. ಆಗ ದೇವರು ನಿನಗೆ ವಿಮುಖರಾಗರು. 8ನಿನ್ನ ಬಂಡವಾಳಕ್ಕೆ ಅನುಸಾರವಾಗಿ ದಾನಮಾಡು ಹೆಚ್ಚಾಗಿದ್ದರೆ ಹೆಚ್ಚಾಗಿ ಕೊಡು, ಕಡಿಮೆಯಾಗಿದ್ದರೆ ಕಡಿಮೆ ಕೊಡಲು ಹಿಂಜರಿಯಬೇಡ. 9ಹೀಗೆ ಮಾಡುವುದರಿಂದ ವಿಪತ್ತಿನ ದಿನಕ್ಕೆ ದೊಡ್ಡ ನಿಧಿಯನ್ನೇ ಶೇಖರಿಸಿದಂತಾಗುತ್ತದೆ. 10ದಾನಧರ್ಮವು ಮರಣದಿಂದ ಪಾರುಮಾಡುತ್ತದೆ; ಕಾರ್ಗತ್ತಲೆಗೆ ನುಗ್ಗದಂತೆ ಕಾಪಾಡುತ್ತದೆ. 11ಸರ್ವೋನ್ನತರ ಸನ್ನಿಧಿಯಲ್ಲಿ ದಾನಧರ್ಮ ಎಂಬುದು ಉತ್ಕೃಷ್ಟ ಕಾಣಿಕೆ.

12 "ಮಗನೇ, ವ್ಯಭಿಚಾರದಿಂದ ದೂರವಿರು; ನಿನ್ನ ತಂದೆಯ ಕುಲದಿಂದಲೇ ಪತ್ನಿಯನ್ನು ಆರಿಸಿಕೊ. ನಿನ್ನ ತಂದೆಯ ಕುಲಕ್ಕೆ ಸೇರದ ವಿಜಾತಿ ಸ್ತ್ರೀಯನ್ನು ಹೆಂಡತಿಯಾಗಿ ತೆಗೆದುಕೊಳ್ಳಬೇಡ.

ಏಕೆಂದರೆ ನಾವು ಪ್ರವಾದಿಗಳ ಸಂತಾನದವರು; ನಮ್ಮ ಪೂರ್ವಜರಾದ ನೋವ, ಅಬ್ರಹಾಮ್, ಇಸಾಕ್ ಹಾಗೂ ಯಕೋಬರನ್ನು ಸ್ಮರಿಸಿಕೊ. ಅವರೆಲ್ಲರು ತಮ್ಮ ಸ್ವಂತ ಕುಲದವರಿಂದಲೇ ಹೆಂಡತಿಯರನ್ನು ಆರಿಸಿಕೊಂಡರು. ಸಂತಾನ ಭಾಗ್ಯವನ್ನು ಪಡೆದರು. ಆ ಸಂತತಿಯವರೇ ನಾಡಿಗೆ ಬಾಧ್ಯಸ್ಥರಾಗುವರು.
13ಅಂತೆಯೇ ಮಗನೇ, ನೀನು ಕೂಡ ನಿನ್ನ ಬಂಧುಬಳಗದವರನ್ನು ವೀಕ್ಷಿಸಬೇಕು. ಅವರನ್ನು ಹಾಗು ಆ ನಿನ್ನ ಸ್ವಜನರ ಪುತ್ರಪುತ್ರಿಯರನ್ನು ತಿರಸ್ಕರಿಸುವಷ್ಟು ಗರ್ವ ನಿನಗೆ ಬೇಡ. ಅವರಿಂದಲೇ ನಿನ್ನ ಪತ್ನಿಯನ್ನು ಆರಿಸಿಕೊಳ್ಳಬೇಕು. ಏಕೆಂದರೆ, ಗರ್ವದಿಂದ ವಿನಾಶ ಹಾಗು ನಿರಾಶೆ ಉಂಟಾಗುತ್ತದೆ. ಹಾಗೆಯೇ ಸೋಮಾರಿತನದಿಂದ ಕೊರತೆ ಕಡುಬಡತನ ಬಂದೊದಗುತ್ತದೆ; ಬರಗಾಲದ ತಾಯಿ ಸೋಮಾರಿತನವೇ!

14 "ನಿನಗೆ ಕೆಲಸಮಾಡುವವರ ಕೂಲಿಯನ್ನು ಮರುದಿನದವರೆಗೂ ಮಡಗಿಕೊಳ್ಳಬೇಡ. ತಕ್ಷಣವೇ ಅವರಿಗೆ ಅದನ್ನು ಕೊಟ್ಟುಬಿಡು. ಹೀಗೆ ನೀನು ದೇವರಿಗೆ ಸೇವೆಸಲ್ಲಿಸಿದರೆ ನಿನಗೂ ಸಂಭಾವನೆ ದೊರಕುವುದು ಮಗನೇ. ನಿನ್ನ ಕೆಲಸಕಾರ್ಯಗಳನ್ನೆಲ್ಲ ಎಚ್ಚರಿಕೆಯಿಂದ ಮಾಡು. ನಿನ್ನ ನಡತೆ ಶಿಸ್ತಿನಿಂದ ಕೂಡಿರಲಿ.
15ಇತರರು ನಿನಗೆ ಏನು ಮಾಡಬಾರದೆಂದು ಎಣಿಸುತ್ತೀಯೋ ಅದನ್ನು ನೀನು ಸಹ ಅವರಿಗೆ ಮಾಡಬೇಡ.

"ಅಮಲೇರುವ ತನಕ ಮದ್ಯಪಾನದಲ್ಲಿ ಮಗ್ನನಾಗಿರಬೇಡ. ಕುಡಿತ ನಿನಗೆ ಗೆಳೆತನ ಆಗಬಾರದು.

16 "ಹಸಿದವರಿಗೆ ಅನ್ನಾಹಾರಗಳನ್ನು ಕೊಡು. ಬಟ್ಟೆಯಿಲ್ಲದೆ ಬರಿದಾಗಿರುವವರಿಗೆ ಬಟ್ಟೆ ಕೊಡು. ಅತಿಯಾಗಿರುವುದನ್ನು ಉದಾರವಾಗಿ ದಾನಮಾಡು. ಕೊಡುವಾಗ ಗೊಣಗುಟ್ಟದೆ ಕೊಡು.

17 "ಪುಣ್ಯಾತ್ಮರು ಸತ್ತಾಗ ಅನ್ನಪಾನಗಳನ್ನು ಅವರ ಕುಟುಂಬಕ್ಕೆ ದಾನಮಾಡು. ದುರಾತ್ಮರಿಗೆ ಏನನ್ನೂ ಕೊಡಬೇಡ.

18 "ಜ್ಞಾನಿಗಳ ಸಲಹೆಯನ್ನು ಪಡೆ. ಉಪಯುಕ್ತವಾದ ಯಾವ ಸಲಹೆಯನ್ನು ಅಲ್ಲಗಳೆಯಬೇಡ.

19 "ಎಲ್ಲಾ ಕಾಲದೊಳು ದೇವರಾದ ಸರ್ವೇಶ್ವರನನ್ನು ಹೊಗಳು. ನಿನ್ನ ಮಾರ್ಗವನ್ನು ಸರಾಗಬಾಡಬೇಕೆಂದು, ನಿನ್ನ ಯೋಜನೆಗಳನ್ನೂ ಆಶೋತ್ತರಗಳನ್ನೂ ಪೂರೈಸಬೇಕೆಂದು ಯಾಚಿಸು. ಸುಜ್ಞಾನವು ಪ್ರತಿಯೊಂದು ರಾಷ್ಟ್ರದ ಸಂಪತ್ತಲ್ಲ. ಆ ರಾಷ್ಟ್ರಗಳಿಗೆ ಸಂಭಾವನೆ ನೀಡುವವರು ಸರ್ವೇಶ್ವರ. ತಮ್ಮ ಚಿತ್ತಾನುಸಾರ ಅವರು ಮೇಲಕ್ಕೆತ್ತುತ್ತಾರೆ, ಇಲ್ಲವೆ ಪಾತಾಳದ ಅಂತರಾಳಕ್ಕೆ ಕೆಡವಿಬಿಡುತ್ತಾರೆ.

"ಆದುದರಿಂದ ಪ್ರಿಯ ಮಗನೇ, ಈ ಬುದ್ಧಿ ಮಾತುಗಳನ್ನು ನೆನಪಿನಲ್ಲಿಡು. ಇವು ನಿನ್ನ ಹೃದಯದಿಂದ ಅಳಿಸಿಹೋಗದಂತೆ ಎಚ್ಚರವಹಿಸು.

20 "ಮಗನೇ, ಈಗ ನಿನಗೊಂದು ವಿಷಯ ತಿಳಿಸಬೇಕಾಗಿದೆ. ಅದೇನೆಂದರೆ, ಮೇದ್ಯನಾಡಿನ ರ್‍ಹಾಜೆಸ್ ಎಂಬ ಪಟ್ಟಣದಲ್ಲಿ ಗಬ್ರಿಯಾಸನ ಮಗ ಗಬಯೇಲ್ ಎಂಬವನಿದ್ದಾನೆ. ಅವನ ಬಳಿ ನಾನು ಮುನ್ನೂರು ಕಿಲೋಗ್ರಾಮಿನಷ್ಟು ಬೆಳ್ಳಿನಾಣ್ಯಗಳನ್ನು ಇಟ್ಟಿದ್ದೇನೆ.
21ಮಗನೇ, ನಮಗೀಗ ಬಡತನ ಬಂದಿದೆ, ಆದರೆ ಹೆದರಬೇಡ, ದೇವರಿಗೆ ಭಯಪಟ್ಟು ಎಲ್ಲಾ ಪಾಪಗಳಿಂದ ದೂರವಿದ್ದು ದೇವರಾದ ಸರ್ವೇಶ್ವರನ ದೃಷ್ಟಿಯಲ್ಲಿ ಸರಿಯಾದುದನ್ನೇ ಮಾಡಿಕೊಂಡು ಬಂದೆಯಾದರೆ ನೀನೊಬ್ಬ ದೊಡ್ಡ ಶ್ರೀಮಂತನಾಗುವೆ," ಎಂದು ಬುದ್ಧಿವಾದ ಹೇಳಿದನು.

## ಪ್ರಯಾಣಕ್ಕೆ ಸಿದ್ಧತೆ

**5** ತೊಬಿಯಾಸನು ತನ್ನ ತಂದೆ ತೊಬೀತನಿಗೆ, "ಅಪ್ಪಾ, ನೀವು ಹೇಳಿದ್ದೆಲ್ಲವನ್ನು ಮಾಡುತ್ತೇನೆ.
2ಆದರೆ ಗಬಯೇಲನಿಂದ ಹಣವನ್ನು ಪಡೆಯುವುದು ಹೇಗೆ? ನನ್ನ ಪರಿಚಯ ಅವನಿಗಿಲ್ಲ. ಅವನ ಪರಿಚಯ ನನಗಿಲ್ಲ. ಅವನು ನನ್ನನ್ನು ನಂಬಿ ಹಣವನ್ನು ಹಿಂದಿರುಗಿಸುವಂತೆ ಯಾವ ಗುರುತನ್ನು ಅವನಿಗೆ ತೋರಿಸಲಿ? ಅಲ್ಲದೆ ಮೇದ್ಯನಾಡಿನ ದಾರಿ ನನಗೆ ಗೊತ್ತಿಲ್ಲ, ಅಲ್ಲಿಗೆ ಹೋಗುವುದಾದರೂ ಹೇಗೆ?" ಎಂದು ವಿಚಾರಿಸಿದನು.

3 ಅದಕ್ಕೆ ತೊಬೀತನು, "ನಾವಿಬ್ಬರೂ ಒಂದು ಮುಚ್ಚಳಿಕೆಗೆ ಸಹಿ ಹಾಕಿದ್ದೇವೆ. ಅದನ್ನು ಇಬ್ಭಾಗ ಮಾಡಿ, ಒಂದನ್ನು ತೆಗೆದುಕೊಂಡು ಇನ್ನೊಂದನ್ನು ಆ ಬೆಳ್ಳಿನಾಣ್ಯದ ಜೊತೆಯಲ್ಲೇ ಇಟ್ಟಿದ್ದೇನೆ. ಇಲ್ಲಿಗೆ

ಇಪ್ಪತ್ತು ವರ್ಷಗಳು ಸಂದಿವೆ ಆ ಹಣವನ್ನು ಅವನ ಬಳಿಯಲ್ಲಿಟ್ಟು. ಮಗನೇ, ನಿನ್ನೊಂದಿಗೆ ಪ್ರಯಾಣಮಾಡಲು ಒಬ್ಬ ನಂಬಿಗಸ್ಥ ವ್ಯಕ್ತಿಯನ್ನು ಹುಡುಕು. ನೀನು ಹೋಗಿ ಹಿಂದಿರುಗುವವರೆಗೆ ಎಷ್ಟು ದಿನಗಳು ಹಿಡಿಯುತ್ತವೋ ಅಷ್ಟು ದಿನಗಳ ಕೂಲಿಯನ್ನು ಅವನಿಗೆ ಕೊಡೋಣ. ಹೋಗಿ ಗಬಯೇಲನಿಂದ ಆ ಹಣವನ್ನು ತೆಗೆದುಕೊಂಡು ಬಾ," ಎಂದು ಆಜ್ಞಾಪಿಸಿದನು.

### ರಫಯೇಲನ ಭೇಟಿ

4 ತೊಬಿಯಾಸನು ತನ್ನೊಡನೆ ಮೇದ್ಯಕ್ಕೆ ಪ್ರಯಾಣಮಾಡಬಲ್ಲ ಹಾಗು ಅಲ್ಲಿಗೆ ಹೋಗಲು ದಾರಿ ತೋರಿಸಬಲ್ಲ ಒಬ್ಬ ವ್ಯಕ್ತಿಯನ್ನು ಹುಡುಕುವ ಆಲೋಚನೆಯಿಂದ ಹೊರಗೆ ಬಂದನು. ಕೂಡಲೇ ರಫಯೇಲನೆಂಬ ಒಬ್ಬನು ಅವನಿಗೆ ಎದುರಾಗಿ ನಿಂತಿರುವುದನ್ನು ಕಂಡನು. ಆತ ದೇವದೂತನೆಂದು ತೊಬಿಯಾಸನಿಗೆ ತಿಳಿದಿರಲಿಲ್ಲ. "ಅಯ್ಯಾ, ನೀನು ಎಲ್ಲಿಯವನು?" ಎಂದು ಅವನನ್ನು ಕೇಳಿದನು.

5 ಅದಕ್ಕೆ ರಫಯೇಲನು ಮರುತ್ತರವಾಗಿ, "ನಾನು ನಿನ್ನ ಸೋದರ ಇಸ್ರಯೇಲರಲ್ಲಿ ಒಬ್ಬನು; ಕೆಲಸ ಹುಡುಕಿಕೊಂಡು ನಿನೆವೆಗೆ ಬಂದಿದ್ದೇನೆ," ಎಂದನು.

"ಮೇದ್ಯಕ್ಕೆ ಹೋಗಲು ನಿನಗೆ ದಾರಿಗೊತ್ತೇ?" ಎಂದು ಕೇಳಿದ ತೊಬಿಯಾಸ್.

6 "ಹೌದು, ಚೆನ್ನಾಗಿ ಗೊತ್ತಿದೆ. ಅಲ್ಲಿಗೆ ಅನೇಕಸಾರಿ ಹೋಗಿ ಬಂದಿದ್ದೇನೆ. ಅಲ್ಲಿಯ ದಾರಿಗಳೆಲ್ಲ ನನಗೆ ಸುಪರಿಚಿತ. ಮೇದ್ಯಕ್ಕೆ ಹೋಗಿ ಅಲ್ಲಿ ರ್‍ಹಾಜೆಸ್ ಎಂಬ ಊರಿನಲ್ಲಿ ನನ್ನ ಬಂಧುಗಳಲ್ಲೊಬ್ಬನಾದ ಗಬಯೇಲನ ಮನೆಯಲ್ಲಿ ಎಷ್ಟೋ ಸಾರಿ ತಂಗಿದ್ದೇನೆ. ಎಕ್‌ಬತಾನ ನಗರದಿಂದ ರ್‍ಹಾಜೆಸ್ ಪಟ್ಟಣವನ್ನು ತಲುಪಲು ಎರಡು ದಿನ ಹಿಡಿಯುತ್ತದೆ. ರ್‍ಹಾಜೆಸ್ ಇರುವುದು ಮಲೆನಾಡಿನಲ್ಲಿ, ಎಕ್‌ಬತಾನ ಇರುವುದು ಬಯಲು ನಾಡಿನ ಮಧ್ಯದಲ್ಲಿ," ಎಂದು ವಿವರವಿತ್ತನು.

7 ಆಗ ತೊಬಿಯಾಸನು ರಫಯೇಲನಿಗೆ, "ಹಾಗಾದರೆ, ಅಯ್ಯಾ, ಇಲ್ಲೇ ಕಾದಿರು. ನಾನು ಹೋಗಿ ನನ್ನ ತಂದೆಗೆ ತಿಳಿಸಿಬರುತ್ತೇನೆ. ನಿನ್ನೊಡನೆ ನಾನು ಪ್ರಯಾಣಮಾಡಬೇಕಾಗಿದೆ. ನಿನಗೆ ಬೇಕಾದ ಕೂಲಿಯನ್ನು ಕೊಡುತ್ತೇನೆ," ಎಂದು ಹೇಳಲು, 8"ಆಗಲಿ ಕಾದಿರುತ್ತೇನೆ. ಆದರೆ ತಡಮಾಡಬೇಡ," ಎಂದನು.

9 ತೊಬಿಯಾಸನು ಒಳಕ್ಕೆ ಹೋಗಿ ತನ್ನ ತಂದೆಗೆ, "ನಮ್ಮ ಸೋದರ ಇಸ್ರಯೇಲರಲ್ಲಿ ಒಬ್ಬ ನನಗೆ ಸಿಕ್ಕಿಬಿಟ್ಟಿದ್ದಾನೆ," ಎನ್ನಲು ತೊಬೀತನು, "ಅವನನ್ನು ಒಳಗೆ ಕರೆದುಕೊಂಡು ಬಾ ಮಗನೇ. ಅವನ ಕುಟುಂಬ ಯಾವುದು? ಅವನ ಕುಲ ಯಾವುದು? ಅವನು ನಿನ್ನೊಂದಿಗೆ ಪ್ರಯಾಣ ಮಾಡಲು ನಂಬಿಗಸ್ಥ ಸಂಗಡಿಗನೋ? ಎಂದು ತಿಳಿದುಕೊಳ್ಳಬೇಕು," ಎಂದನು.

### ರಫಯೇಲ ತೊಬೀತರ ಭೇಟಿ

ತೊಬಿಯಾಸನು ಹೊರಗೆ ಹೋಗಿ, ರಫಯೇಲನಿಗೆ, "ಅಯ್ಯಾ, ನನ್ನ ತಂದೆ ನಿನ್ನನ್ನು ಕರೆಯುತ್ತಿದ್ದಾರೆ," ಎಂದನು. ಆತ ಒಳಗೆ ಬರಲು, ತೊಬೀತನೇ ಅವನಿಗೆ ನಮಸ್ಕಾರ ಮಾಡಿದನು. ರಫಯೇಲನು, "ನಮಸ್ಕಾರ, ಕ್ಷೇಮವೇ?" ಎಂದನು.

ಅದಕ್ಕೆ ತೊಬೀತನು, "ನನಗೆಲ್ಲಿ ಕ್ಷೇಮ? ನಾನೊಬ್ಬ ಕುರುಡ. ಆಕಾಶದ ಬೆಳಕನ್ನು ನೋಡಲು ನನ್ನಿಂದಾಗದು. ಕತ್ತಲಲ್ಲಿರುವ ಸತ್ತವರಂತೆ ಇದ್ದೇನೆ. ಆದರೂ ಜೀವಂತನಾಗಿದ್ದೇನೆ. ಜನರ ಮಾತು ಕೇಳಿಸುತ್ತದೆ. ಆದರೆ ಅವರು ಕಾಣಿಸುವುದಿಲ್ಲ," ಎಂದು ಹೇಳಿದನು.

ಅದಕ್ಕೆ ರಫಯೇಲನು, "ಧೈರ್ಯದಿಂದಿರು, ದೇವರು ನಿನ್ನನ್ನು ಶೀಘ್ರದಲ್ಲೇ ಗುಣಪಡಿಸುವರು, ಧೈರ್ಯದಿಂದಿರು," ಎಂದನು. ತೊಬೀತನು ಅವನಿಗೆ, "ನನ್ನ ಮಗ ತೊಬಿಯಾಸನು ಮೇದ್ಯಕ್ಕೆ ಹೋಗಬೇಕೆಂದಿದ್ದಾನೆ. ಅವನಿಗೆ ದಾರಿ ತೋರಿಸಲು ಅವನೊಂದಿಗೆ ಹೋಗಬಲ್ಲೆಯಾ? ನಿನಗೆ ಬೇಕಾದ ಕೂಲಿ ಕೊಡುತ್ತೇನೆ," ಎಂದು ಕೇಳಿದನು.

ಅದಕ್ಕೆ ರಫಯೇಲನು, "ಆಗಲಿ, ಅವನ ಸಂಗಡ ಹೋಗುತ್ತೇನೆ. ನನಗೆ ದಾರಿ ಚೆನ್ನಾಗಿ ಗೊತ್ತಿದೆ. ಅನೇಕ ಸಾರಿ ಮೇದ್ಯಕ್ಕೆ ಹೋಗಿ ಬಂದಿದ್ದೇನೆ. ಮಲೆನಾಡಿನಲ್ಲೂ ಬಯಲು ಸೀಮೆಯಲ್ಲೂ ಪ್ರಯಾಣಮಾಡಿದ್ದೇನೆ. ಆ ದಾರಿಗಳ ಪರಿಚಯ ನನಗಿದೆ," ಎಂದು ಉತ್ತರವಿತ್ತನು.

10 ಆಗ ತೊಬೀತನು, "ತಮ್ಮಾ, ನಿನ್ನ ಕುಟುಂಬ ಯಾವುದು? ನಿನ್ನ ಕುಲ ಯಾವುದು? ತಿಳಿಸು," ಎಂದು ಕೇಳಲು ರಫಯೇಲನು, "ನನ್ನ ಕುಲದ ವಿಷಯ ನಿನಗೇಕೆ?" ಎಂದನು.

11 ಅದಕ್ಕೆ ತೊಬೀತನು, "ತಮ್ಮಾ, ನೀನು ಯಾರ ಮಗ? ನಿನ್ನ ಹೆಸರೇನು? ಇದನ್ನು ಖಚಿತವಾಗಿ ತಿಳಿದುಕೊಳ್ಳಬೇಕಾಗಿದೆ, ಸ್ಪಷ್ಟವಾಗಿ ಹೇಳು," ಎಂದನು.

12 ಅದಕ್ಕೆ ದೂತನು, "ನಾನು ಅಜರ್ಯ, ನಿನ್ನ ಬಳಗದಲ್ಲಿ ಪ್ರಸಿದ್ಧನಾದ ಅನನೀಯನ ಮಗ," ಎಂದು ಉತ್ತರಕೊಟ್ಟನು.

13 ಆಗ ತೊಬೀತನು, "ಸಂತೋಷ, ದೇವರು ನಿನ್ನನ್ನು ಆಶೀರ್ವದಿಸಲಿ! ನಿನ್ನ ಕುಲಗೋತ್ರದ ಬಗ್ಗೆ ವಿಚಾರಿಸಿದ್ದಕ್ಕಾಗಿ ಬೇಸತ್ತುಕೊಳ್ಳಬೇಡ. ನಿನ್ನ ಕುಟುಂಬದ ಬಗ್ಗೆ ಖಚಿತವಾಗಿ ತಿಳಿದುಕೊಳ್ಳಬೇಕಾಗಿತ್ತು, ಅಷ್ಟೆ. ನೀನು ನಮ್ಮವನೇ ಎಂದು ಈಗ ತಿಳಿಯಿತು. ನೀನು ಸುಪ್ರಸಿದ್ಧ ಹಾಗೂ ಒಳ್ಳೆಯ ಮನೆತನದವನು. ಅನನೀಯ ಮತ್ತು ನಾತಾನ್ ಇಬ್ಬರೂ ಶೆಮ್ಮಾಯನ ಮಕ್ಕಳು; ಅವರ ಪರಿಚಯ ನನಗೆ ಚೆನ್ನಾಗಿದೆ. ಅವರೂ ನಾನೂ ಒಟ್ಟಿಗೆ ಜೆರುಸಲೇಮಿಗೆ ಹೋಗಿ ಆರಾಧನೆಮಾಡಿ ಬರುತ್ತಿದ್ದೆವು. ಅವರು ಎಂದೂ ದಾರಿತಪ್ಪಿದವರಲ್ಲ. ನಿನ್ನ ಬಳಗದವರೆಲ್ಲ ಒಳ್ಳೆಯವರು. ನೀನು ಒಳ್ಳೆಯ ಸಂತತಿಗೆ ಸೇರಿದವನು. ನೀನು ಬಂದದ್ದು ಬಹಳ ಉಪಕಾರವಾಯಿತು," ಎಂದನು.

14 ಬಳಿಕ ತೊಬೀತನು ಮುಂದುವರಿಸುತ್ತಾ, "ನಿನಗೆ ದಿನಗೂಲಿಯಷ್ಟೇ ಅಲ್ಲ, ನನ್ನ ಮಗನಿಗಾಗುವಷ್ಟು ಖರ್ಚನ್ನೂ ಸೇರಿಸಿಕೊಡುತ್ತೇನೆ. ನನ್ನ ಮಗನ ಜೊತೆಯಲ್ಲಿ ಹೋಗಿ ಬಾ. 15ದಿನ ಕೂಲಿಗಿಂತ ಮಿಗಿಲಾದ ಸಂಭಾವನೆಯನ್ನು ಕೊಡುತ್ತೇನೆ," ಎಂದನು.

16 ರಫಯೇಲನು ಮರುತ್ತರವಾಗಿ, "ಅವನ ಸಂಗಡ ಹೋಗಿಬರುತ್ತೇನೆ, ಹೆದರಬೇಡ. ಸುರಕ್ಷಿತವಾಗಿ ಇಬ್ಬರೂ ಹೋಗಿಬರುತ್ತೇವೆ. ದಾರಿಯೂ ಅಪಾಯಕಾರಿಯಲ್ಲ," ಎಂದನು.

ಆಗ ತೊಬೀತನು, "ತಮ್ಮಾ, ದೇವರು ನಿನ್ನನ್ನು ಆಶೀರ್ವದಿಸಲಿ!" ಎಂದನು. ಬಳಿಕ ತನ್ನ ಮಗ ತೊಬಿಯಾಸನನ್ನು ಕರೆದು, "ಮಗನೇ, ಪ್ರಯಾಣಕ್ಕೆ ಸಿದ್ಧನಾಗು. ಅಗತ್ಯವಾದುದನ್ನೆಲ್ಲ ತೆಗೆದುಕೊ. ಈ ನಿನ್ನ ಸೋದರನೊಂದಿಗೆ ಹೊರಡು. ಪರಲೋಕದ ದೇವರು ನಿಮ್ಮನ್ನು ಸುರಕ್ಷಿತವಾಗಿ ಅಲ್ಲಿಗೆ ಕೊಂಡೊಯ್ದು, ಸುಕ್ಷೇಮದಿಂದ ಹಿಂದಿರುಗುವಂತೆ ಮಾಡಲಿ. ಸ್ವರ್ಗದೂತನು ನಿಮ್ಮೊಂದಿಗಿದ್ದು ನಿಮ್ಮನ್ನು ಕಾಪಾಡಲಿ!" ಎಂದನು.

ತೊಬಿಯಾಸನು ತಂದೆತಾಯಿಗಳಿಗೆ ಮುತ್ತಿಟ್ಟು ಅವರನ್ನು ಬೀಳ್ಕೊಟ್ಟನು. ತೊಬೀತನು ಅವರಿಗೆ ಸುಖಕರವಾದ ಪ್ರಯಾಣವನ್ನು ಹಾರೈಸಿದನು.

17 ತೊಬಿಯಾಸನ ತಾಯಿ ಕಣ್ಣೀರಿಡುತ್ತಾ ತೊಬೀತನಿಗೆ, "ನನ್ನ ಮಗನನ್ನು ಏತಕ್ಕೆ ಕಳುಹಿಸಿ ಬಿಟ್ಟಿರಿ? ಅವನು ನಮ್ಮ ಮಧ್ಯೆ ಓಡಾಡುತ್ತಾ, ನಮಗೆ ಊರುಗೋಲಾಗಿದ್ದನಲ್ಲವೆ? 18ಹಣ ಅಷ್ಟು ಮುಖ್ಯವಾಗಿಬಿಟ್ಟಿತೆ? ಹಣಕ್ಕಿಂತ ಮಗ ಅಮೂಲ್ಯನಲ್ಲವೆ? 19ದೇವರು ನಮಗೆ ದಯಪಾಲಿಸಿರುವ ಜೀವನೋಪಾಯವೇ ಸಾಕಾಗಿತ್ತು," ಎಂದಳು.

20 ತೊಬೀತನು ಆಕೆಗೆ, "ಚಿಂತಿಸಬೇಡ. ನಮ್ಮ ಮಗ ಸುಖಕರವಾಗಿ ಹೋಗಿಬರುವನು. ಅವನು ಹಿಂದಿರುಗಿ ಬಂದಾಗ ಸುರಕ್ಷಿತವಾಗಿರುವನು ಎಂದು ನೀನೇ ಕಣ್ಣಾರೆ ನೋಡುವಿಯಂತೆ. 21ಆದುದರಿಂದ ಪ್ರಿಯಳೇ, ನಿನ್ನ ವಾದವನ್ನು ನಿಲ್ಲಿಸು. ಅವನ ಬಗ್ಗೆ ಕಳವಳಪಡಬೇಡ. ಒಳ್ಳೇ ದೇವದೂತನೊಬ್ಬನು ಅವನ ಜೊತೆಯಲ್ಲಿ ಇದ್ದಾನೆ. ಅವನ ಪ್ರಯಾಣ ಯಶಸ್ವಿಯಾಗುವುದು ನಿಶ್ಚಯ. ಅವನು ಸುಖಕರವಾಗಿ ಹಿಂದಿರುಗುವನು," ಎಂದು ಸಂತೈಸಿದನು. ಅನ್ನಳು ಸಮಾಧಾನಗೊಂಡು ಅಳುವುದನ್ನು ನಿಲ್ಲಿಸಿದಳು.

## ಮೀನುಬೇಟೆ

**6** ತೊಬಿಯಾಸನೂ ದೇವದೂತನೂ ಪ್ರಯಾಣ ಹೊರಟರು. ತೊಬಿಯಾಸನ ನಾಯಿ ಅವರನ್ನು ಹಿಂಬಾಲಿಸಿತು. ಸೂರ್ಯ ಮುಳುಗುವವರೆಗೆ ಪ್ರಯಾಣಮಾಡಿ, ಟೈಗ್ರಿಸ್ ನದಿಯ ದಡದಲ್ಲಿ ತಂಗಿದರು. 2ತೊಬಿಯಾಸನು ಕಾಲುತೊಳೆಯಲು ನದಿಗೆ ಇಳಿದುಹೋದನು. ತಕ್ಷಣವೇ ದೊಡ್ಡ ಮೀನೊಂದು ನೀರಿಂದ ಜಿಗಿದು ಅವನ ಪಾದವನ್ನು ನುಂಗುವುದರಲ್ಲಿ ಇತ್ತು. ಆಗ ತೊಬಿಯಾಸನು ಗಟ್ಟಿಯಾಗಿ ಕೂಗಿಕೊಂಡನು. 3ದೇವದೂತನು ಅವನಿಗೆ, "ಆ ಮೀನನ್ನು ಬಿಗಿಯಾಗಿ ಹಿಡಿದುಕೊ; ಹೋಗಲು ಬಿಡಬೇಡ," ಎಂದನು. ಅಂತೆಯೇ ತೊಬಿಯಾಸನು ಮೀನನ್ನು ಹಿಡಿದು ದಡಕ್ಕೆ ಎಳೆದುತಂದನು.

4 ಆಗ ದೂತನು ಅವನಿಗೆ, "ಆ ಮೀನನ್ನು ಕೊಯ್ದು ತೆರೆ. ಅದರ ಒಳಗಿರು ಪಿತ್ತಕೋಶ, ಹೃದಯ ಮತ್ತು ಯಕೃತ್ತನ್ನು ತೆಗೆದಿಡು. ಕರುಳನ್ನು ಎಸೆದುಬಿಡು. ಏಕೆಂದರೆ ಪಿತ್ತಕೋಶ, ಹೃದಯ ಮತ್ತು ಯಕೃತ್ತು ಔಷಧಕ್ಕೆ ಉಪಯೋಗವಾಗುತ್ತದೆ," ಎಂದು ಹೇಳಿದನು. 5ತೊಬಿಯಾಸನು ಹಾಗೆಯೇ ಮೀನನ್ನು ಕೊಯ್ದು ತೆಗೆದು ಪಿತ್ತಕೋಶ, ಹೃದಯ ಮತ್ತು ಯಕೃತ್ತನ್ನು ತೆಗೆದಿಟ್ಟನು. ಮೀನನ್ನು ಹುರಿದು ಸ್ವಲ್ಪ ಭಾಗವನ್ನು ತಿಂದನು. ಮಿಕ್ಕ ಭಾಗವನ್ನು ಉಪ್ಪುಹಾಕಿ ಇಟ್ಟುಕೊಂಡನು.

ಪ್ರಯಾಣವನ್ನು ಮುಂದುವರಿಸುತ್ತಾ ಇಬ್ಬರೂ ಮೇದ್ಯನಾಡನ್ನು ಸಮೀಪಿಸಿದರು. 6ಆಗ ತೊಬಿಯಾಸನು, "ಗೆಳೆಯಾ, ಅಜರ್ಯನೇ, ಮೀನಿನ ಪಿತ್ತಕೋಶ, ಹೃದಯ ಮತ್ತು ಯಕೃತ್ತಿನಿಂದ ಏನನ್ನು ಗುಣಪಡಿಸಬಹುದು?" ಎಂದು ಪ್ರಶ್ನಿಸಿದನು.

7 ಅದಕ್ಕೆ ಪ್ರತ್ಯುತ್ತರವಿತ್ತ ದೇವದೂತನು, "ಮೀನಿನ ಹೃದಯವನ್ನೂ ಪಿತ್ತಕೋಶವನ್ನೂ ಪಿಶಾಚಿ ಪೀಡಿತರಾದ ಸ್ತ್ರೀಪುರುಷರ ಮುಂದೆ ಸುಟ್ಟರೆ, ಅವರು ಸಂಪೂರ್ಣವಾಗಿ ಸ್ವಸ್ಥರಾಗುವರು. 8ಅಂತೆಯೇ, ಯಾರೊಬ್ಬನ ಕಣ್ಣುಗಳನ್ನು ಬಿಳಿಮಚ್ಚೆಗಳಿದ್ದರೆ, ಪಿತ್ತರಸವನ್ನು ಕಣ್ಣಿಗೆ ಹಚ್ಚಿ ಊದಬೇಕು. ಆಗ ಮಚ್ಚೆಗಳು ಮಾಯವಾಗುತ್ತವೆ. ಕಣ್ಣುಗಳು ಗುಣಹೊಂದುತ್ತವೆ," ಎಂದನು.

## ಎಕ್‌ಬತಾನ ನಗರಕ್ಕೆ ಪ್ರಯಾಣ

9 ಮೇದ್ಯ ನಾಡನ್ನು ತಲುಪಿ, ಎಕ್‌ಬತಾನ ನಗರವನ್ನು ಸಮೀಪಿಸಿದಾಗ ರಫಯೇಲನು ತೊಬಿಯಾಸನಿಗೆ, 10"ಸಹೋದರ ತೊಬಿಯಾಸನೇ," ಎನ್ನಲು ತೊಬಿಯಾಸನು, "ಏನಯ್ಯಾ?", ಎಂದು ವಿಚಾರಿಸಿದನು.

ರಫಯೇಲನು, "ಈ ರಾತ್ರಿ ನಿನ್ನ ಬಂಧುವಾದ ರಾಗುಯೇಲನ ಮನೆಯಲ್ಲಿ ನಾವು ತಂಗಬೇಕು. ಆತನಿಗೆ ಸಾರಾ ಎಂಬ ಮಗಳಿದ್ದಾಳೆ. 11ಸಾರಳ ಹೊರತು ಆತನಿಗೆ ಬೇರಾವ ಮಗನಾಗಲೀ ಮಗಳಾಗಲೀ ಇಲ್ಲ. ನೀನು ಆಕೆಗೆ ಸಮೀಪ ಬಂಧು. ಆಕೆಯನ್ನು ಮದುವೆಯಾಗಲು ಇತರ ಎಲ್ಲರಿಗಿಂತಲೂ ನಿನಗೇ ಹೆಚ್ಚು ಹಕ್ಕಿದೆ. ಆಕೆಯ ತಂದೆಯ ಪಿತ್ರಾರ್ಜಿತಕ್ಕೆಲ್ಲ ನೀನೇ ಬಾಧ್ಯಸ್ಥ. 12ಅದಲ್ಲದೆ ಆಕೆ ಬುದ್ಧಿವಂತೆ, ಧೈರ್ಯವಂತೆ, ಅತೀ ಸುಂದರಿ, ತಂದೆಗೆ ಅಚ್ಚುಮೆಚ್ಚಿನವಳು. ಆಕೆಯನ್ನು ಮದುವೆಯಾಗಲು ನಿನಗೆ ಎಲ್ಲ ವಿಧದಲ್ಲೂ ಹಕ್ಕಿದೆ. ಆದುದರಿಂದ ಗೆಳೆಯನೇ, ನಾನು ಹೇಳುವುದನ್ನು ಕೇಳು. ಈ ರಾತ್ರಿ ಆ ಹುಡುಗಿಯ ಬಗ್ಗೆ ತಂದೆಯ ಬಳಿ ಪ್ರಸ್ತಾಪಿಸುತ್ತೇನೆ. ಆಕೆಯನ್ನು ನಿನಗೆ ಮದುವೆ ಮಾಡಿಕೊಡಬೇಕೆಂದು ಕೇಳುತ್ತೇನೆ. ನಾವು ರ್‍ಹಾಜೆಸ್ ಪಟ್ಟಣದಿಂದು ಹಿಂದಿರುಗಿ ಬಂದಾಗ ವಿವಾಹ ಸಮಾರಂಭವನ್ನು ಏರ್ಪಡಿಸೋಣ. ನೀನು ಅವಳನ್ನು ವಿವಾಹ ಮಾಡಿಕೊಳ್ಳಲು ರಾಗುಯೇಲನು ತಡೆಯುವಂತಿಲ್ಲ ಅಥವಾ ಇನ್ನೊಬ್ಬನಿಗೆ ಆಕೆಯನ್ನು ಕೊಡುವಂತಿಲ್ಲ. ಹಾಗೇನಾದರೂ ಮಾಡಿದರೆ, ಮೋಶೆಯ ನಿಯಮದ ಪ್ರಕಾರ, ಅವನಿಗೆ ಮರಣ ಶಿಕ್ಷೆಯಾಗಬೇಕಾಗುತ್ತದೆ. ಅಲ್ಲದೆ ತನ್ನ ಮಗಳನ್ನು ಮದುವೆಯಾಗಲು ಇತರ ಎಲ್ಲರಿಗಿಂತಲೂ ನಿನಗೆ ಹೆಚ್ಚು ಹಕ್ಕಿದೆ ಎಂದು ಅವನಿಗೆ ಗೊತ್ತಿದೆ. ಆದುದರಿಂದ ಗೆಳೆಯಾ, ನಾನು ಹೇಳುವುದನ್ನು ಕೇಳು: ಈ ಸಂಜೆ ಆ ಹುಡುಗಿಯ ಬಗ್ಗೆ ಮಾತಾಡಿ ನಿಶ್ಚಿತಾರ್ಥಕ್ಕೆ ಏರ್ಪಾಡು ಮಾಡೋಣ. ರ್‍ಹಾಜೆಸ್ ಪಟ್ಟಣದಿಂದ ಹಿಂದಿರುಗುವಾಗ ಆಕೆಯನ್ನು ನಮ್ಮೊಂದಿಗೆ ಕರೆದುಕೊಂಡು, ನಿಮ್ಮ ಮನೆಗೆ ಹೋಗೋಣ," ಎಂದನು.

13 ಆಗ ತೊಬಿಯಾಸನು ರಫಯೇಲನಿಗೆ ಹೀಗೆಂದು ಹೇಳಿದನು, "ಸೋದರ ಅಜರ್ಯನೇ, ಆಕೆಗೆ ಈಗಾಗಲೇ ಏಳು ಸಾರಿ ಮದುವೆ ಆಗಿದೆ, ಒಂದೊಂದು ಸಾರಿಯೂ ಆಕೆಯ ಗಂಡನು ಶಯನ ಕೊಠಡಿಯಲ್ಲೇ ಮೃತಪಟ್ಟಿದ್ದಾನೆ; ಆಕೆ ಕೊಠಡಿಯನ್ನು ಪ್ರವೇಶಿಸಿದ ರಾತ್ರಿಯಲ್ಲೇ ಸಾವನ್ನು ಅಪ್ಪಿದ್ದಾನೆ. 'ಯಾವುದೋ ಒಂದು ದೆವ್ವ ಅವರನ್ನು ಕೊಂದುಹಾಕುತ್ತದೆ' ಎಂದು ಜನರು ಆಡಿಕೊಳ್ಳುವುದನ್ನು ಕೇಳಿದ್ದೇನೆ. 14ಆ ದೆವ್ವ ಆಕೆಗೆ ಮಾತ್ರ ಹಾನಿಯನ್ನು ಮಾಡುವುದಿಲ್ಲ. ಯಾವ ಪುರುಷನಾದರೂ ಆಕೆಯನ್ನು ಸಮೀಪಿಸಿದರೆ ಅಂಥವನನ್ನು ಕೊಂದುಹಾಕುತ್ತದೆ. ಇದರಿಂದ ನನಗೆ ತುಂಬಾ ಭಯವಾಗುತ್ತದೆ. ಏಕೆಂದರೆ ನನ್ನ ತಂದೆಗೆ ನಾನೊಬ್ಬನೇ ಮಗ. ನಾನು ಸತ್ತರೆ, ನನ್ನ ತಂದೆತಾಯಿಯರು ಸಹ ದುಃಖದಿಂದ ಸಮಾಧಿ ಸೇರುವರು. ಅವರನ್ನು ಸಮಾಧಿಮಾಡಲು ಇನ್ನು ಯಾವ ಮಗನೂ ಇಲ್ಲ," ಎಂದನು.

15 ಅದಕ್ಕೆ ರಫಯೇಲನು, "ನಿನ್ನ ತಂದೆ ಕೊಟ್ಟ ಬುದ್ಧಿವಾದವನ್ನು ಮರೆತುಬಿಟ್ಟೆಯಾ? ನಿನ್ನ ತಂದೆಯ ಬಳಗದವರಲ್ಲೇ ಹೆಣ್ಣನ್ನು ಆರಿಸಿಕೊಳ್ಳಬೇಕೆಂದು ನಿನ್ನ ತಂದೆ ಹೇಳಲಿಲ್ಲವೆ? ಆದ್ದರಿಂದ ಗೆಳೆಯಾ, ನನ್ನ ಮಾತನ್ನು ಕೇಳು. ಆ ದೆವ್ವವನ್ನು ಕುರಿತು ಚಿಂತಿಸಬೇಕಾಗಿಲ್ಲ. ಆಕೆಯನ್ನು ಅಂಗೀಕರಿಸು. ಈ ಸಂಜೆ ಆಕೆಯನ್ನು ನಿನಗೆ ಪತ್ನಿಯಾಗಿ ಕೊಡಲಾಗುವುದೆಂದು ನಾನು ಬಲ್ಲೆ. 16ನೀನು ಶಯನ ಕೊಠಡಿಯನ್ನು ಪ್ರವೇಶಿಸುವಾಗ ಆ ಮೀನಿನ ಹೃದಯವನ್ನೂ ಯಕೃತ್ತನ್ನೂ ತೆಗೆದುಕೊಂಡು ಧೂಪದ ಕೆಂಡದ ಮೇಲೆ ಹಾಕು. ಆಗ ಹೊಗೆ ಮೇಲೇಳುವುದು. ದೆವ್ವವು ಆ ವಾಸನೆಯನ್ನು ಮೂಸುತ್ತಲೇ ಓಡಿ ಹೋಗುವುದು. ಅದು ಪುನಃ ಹುಡುಗಿಯ ಬಳಿ ಎಂದಿಗೂ ಸುಳಿಯುವುದಿಲ್ಲ. 17ಬಳಿಕ ನೀವಿಬ್ಬರೂ ಮಲಗಲು ಹೋಗುವುದಕ್ಕೆ ಮುಂಚೆ ಎದ್ದುನಿಂತು ನಿಮಗೆ ಕರುಣೆಯನ್ನೂ ರಕ್ಷಣೆಯನ್ನೂ ದಯಪಾಲಿಸುವಂತೆ ಪರಲೋಕದ ಸರ್ವೇಶ್ವರನನ್ನು ಪ್ರಾರ್ಥಿಸಬೇಕು; ಹೆದರಬೇಡ. 18ಸೃಷ್ಟಿಗೆ ಮುಂಚೆಯೇ ಸಾರಳು ನಿನಗೆ ಮೀಸಲಾಗಿದ್ದಳು. ನೀನು ಆಕೆಯನ್ನು ದೆವ್ವದಿಂದ ಬಿಡಿಸುವೆ; ಆಕೆ ನಿನ್ನನ್ನು ಹಿಂಬಾಲಿಸುವಳು. ಅವಳಿಂದ ನಿನಗೆ ಮಕ್ಕಳು ಆಗುವುವು. ಆ ಮಕ್ಕಳು ನಿನಗೆ ಮೆಚ್ಚುಗೆಯಾಗಿರುವುವು ಎಂಬ ನಂಬಿಕೆ ನನಗಿದೆ. ಇನ್ನು ಸಂಕೋಚ ಪಡಬೇಡ," ಎಂದನು.

ತೊಬಿಯಾಸನು ಈ ಮಾತುಗಳನ್ನು ಆಲಿಸಿದನು. ಸಾರಾ ತನ್ನ ಸ್ವಂತ ಬಳಗದವಳು, ತನ್ನ ತಂದೆಯ ಕುಲಸ್ಥಳು, ಎಂದು ಅರಿತುಕೊಂಡ ಮೇಲೆ ಅವಳ ಮೇಲೆ ಅನುರಾಗ ಮೂಡಿತು. ಆಕೆ ಈತನಿಗೆ ಮನಃಪೂರ್ವಕವಾಗಿ ಆಕರ್ಷಿತಳಾದಳು.

## ರಾಗುಯೇಲನ ಮನೆಯಲ್ಲಿ

**7** ಎಕ್‌ಬತಾನವನ್ನು ಪ್ರವೇಶಿಸುತ್ತಿದ್ದಂತೆಯೇ ತೊಬಿಯಾಸನು, "ಗೆಳೆಯಾ, ಅಜರ್ಯನೇ, ನನ್ನ ಬಂಧು ರಾಗುಯೇಲನ ಮನೆಗೆ ನನ್ನನ್ನು ಕೂಡಲೆ ಕರೆದುಕೊಂಡು ಹೋಗು," ಎಂದನು. ಅಂತೆಯೇ ರಫಯೇಲನು ಅವನನ್ನು ರಾಗುಯೇಲನ ಮನೆಗೆ ಕರೆದೊಯ್ದನು. ರಾಗುಯೇಲನು ತನ್ನ ಮನೆಯ ಅಂಗಳದ ಬಾಗಿಲ ಬಳಿ ಕುಳಿತಿರುವುದನ್ನು ಕಂಡನು. ಅವನನ್ನು ಇವರಿಬ್ಬರೂ ವಂದಿಸಿದರು. ಅದಕ್ಕೆ ಅವನು, "ಗೆಳೆಯರೇ, ಬನ್ನಿ, ನಮಸ್ಕಾರ, ಆರೋಗ್ಯವೇ," ಎಂದು ಸ್ವಾಗತಿಸಿ ಮನೆಯೊಳಕ್ಕೆ ಕರೆದುಕೊಂಡು ಹೋದನು.

2 ರಾಗುಯೇಲನು ತನ್ನ ಹೆಂಡತಿ ಎಡ್ನಳಿಗೆ, "ನೋಡು, ಈ ಯುವಕ ನನ್ನ ನೆಂಟ ತೊಬೀತನಂತೆ ಕಾಣುತ್ತಾನಲ್ಲವೆ?" ಎಂದನು.

3 ಅದಕ್ಕೆ ಎಡ್ನ ಅತಿಥಿಗಳಿಗೆ, "ನೀವು ಎಲ್ಲಿಂದ ಬಂದಿದ್ದೀರಿ?" ಎಂದು ಕೇಳಿದಳು.

ಅದಕ್ಕೆ ಅವರು, "ನಾವು ನಫ್ತಾಲಿ ಕುಲದವರು. ಈಗ ನಿನೆವೆಯಲ್ಲಿ ಗಡೀಪಾರಾಗಿದ್ದೇವೆ," ಎಂದರು.

4 ಅದಕ್ಕೆ ಅವಳು, "ನನ್ನ ನೆಂಟನಾದ ತೊಬೀತನ ಪರಿಚಯವಿದೆಯೆ?" ಎನ್ನಲು ಅವರು, "ಹೌದು, ಪರಿಚಯವುಂಟು," ಎಂದರು. ಆಗ ಎಡ್ನ, "ಅವರು ಆರೋಗ್ಯವೇ?" ಎನ್ನಲು, 5ಅವರು, "ಹೌದು, ಇದ್ದಾರೆ, ಆರೋಗ್ಯದಿಂದ ಇದ್ದಾರೆ," ಎಂದು ಉತ್ತರಿಸಿದರು.

ಪುನಃ ತೊಬಿಯಾಸನು, "ಅವರು ನನ್ನ ತಂದೆ" ಎಂದು ಕೂಡಿಸಿದನು. 6ಇದನ್ನು ಕೇಳಿದ್ದೇ, ರಾಗುಯೇಲನು ಜಿಗಿದು ಅವನನ್ನು ಅಪ್ಪಿಕೊಂಡು ಮುತ್ತಿಟ್ಟು ಆನಂದಬಾಷ್ಪವನ್ನು ಸುರಿಸಿದನು. 7ಅನಂತರ

ಮಾತನ್ನು ಮುಂದುವರಿಸುತ್ತಾ, “ಮಗನೇ, ದೇವರು ನಿನ್ನನ್ನು ಆಶೀರ್ವದಿಸಲಿ. ನಿನ್ನ ತಂದೆ ಗಣ್ಯವ್ಯಕ್ತಿ, ಪುಣ್ಯವಂತ! ಇಂಥಾ ನೀತಿವಂತ, ಪರೋಪಕಾರಿಯಾದಂಥ ವ್ಯಕ್ತಿ ಕುರುಡನಾದುದು ಎಂಥಾ ದುರ್ಭಾಗ್ಯ!” ಎಂದು ಹೇಳಿ ತೊಬಿಯಾಸನನ್ನು ತಬ್ಬಿಕೊಂಡು ಕಣ್ಣೀರಿಟ್ಟನು.
8ಅವನ ಹೆಂಡತಿ ಎಡ್ನಳೂ, ಮಗಳಾದ ಸಾರಳೂ ಸಂತಾಪ ಸೂಚಿಸಿ ಅತ್ತರು.

ಬಳಿಕ ರಾಗುಯೇಲನು ತನ್ನ ಮಂದೆಯ ಟಗರೊಂದನ್ನು ಕೊಯ್ದು ಸ್ವಾಗತ ಔತಣವನ್ನು ಏರ್ಪಡಿಸಿದನು. ಅತಿಥಿಗಳು ಸ್ನಾನಮಾಡಿಕೊಂಡು ಊಟಕ್ಕೆ ಕುಳಿತರು. ಆಗ ತೊಬಿಯಾಸನು ರಫಯೇಲನಿಗೆ, “ಗೆಳೆಯಾ, ಅಜರ್ಯನೇ, ನನ್ನ ಸಂಬಂಧಿಕಳಾದ ಸಾರಳನ್ನು ನನಗೆ ಮದುವೆ ಮಾಡಿಕೊಡಬೇಕೆಂದು ರಾಗುಯೇಲನನ್ನು ಕೇಳುವುದಿಲ್ಲವೆ?” ಎಂದನು.

9 ಇದನ್ನು ಕೇಳಿಸಿಕೊಂಡು ರಾಗುಯೇಲನು ಯುವಕನಿಗೆ,
10“ಮೊತ್ತಮೊದಲು ಈ ರಾತ್ರಿ ಊಟಮಾಡಿ ವಿಶ್ರಮಿಸು. ನನ್ನ ಮಗಳು ಸಾರಳ ಕೈ ಹಿಡಿಯಲು ನಿನಗಲ್ಲದೆ ಬೇರಾರಿಗೂ ಹಕ್ಕಿಲ್ಲ. ನೀನು ನಮ್ಮ ಹತ್ತಿರದ ನೆಂಟನಾದುದರಿಂದ ಆಕೆಯನ್ನು ಬೇರೆ ಯಾರಿಗೂ ಕೊಡುವ ಸ್ವಾತಂತ್ರ್ಯ ನನಗಿಲ್ಲ.
11ಆದರೂ ಮಗೂ, ನಾನು ನಿನಗೆ ನಿಜಸ್ಥಿತಿಯನ್ನು ಹೇಳಬೇಕು. ಬಿಚ್ಚುಮನಸ್ಸಿನಿಂದ ಹೇಳುತ್ತೇನೆ ಕೇಳು. ನಾನು ಈಗಾಗಲೇ ಆಕೆಯನ್ನು ನನ್ನ ಬಳಗದವರಲ್ಲಿ ಏಳು ವ್ಯಕ್ತಿಗಳಿಗೆ ಮದುವೆಮಾಡಿಕೊಟ್ಟೆ. ಆದರೆ ಅವರೆಲ್ಲರು ಅವಳ ಕೊಠಡಿಗೆ ಹೋದ ಮೊದಲ ರಾತ್ರಿಯೇ ಸತ್ತುಹೋದರು. ಆದರೆ ಮಗೂ, ಸದ್ಯಕ್ಕೆ ಊಟ ಮುಗಿಸು. ಸರ್ವೇಶ್ವರ ನಿನಗೆ ಒಳಿತನ್ನೇ ಮಾಡುತ್ತಾರೆ,” ಎಂದನು.

ಅದಕ್ಕೆ ತೊಬಿಯಾಸನು, “ನೀವು ನಿಮ್ಮ ನಿರ್ಧಾರವನ್ನು ತಿಳಿಸುವ ತನಕ ನಾನು ಅನ್ನ ಪಾನವೇನನ್ನೂ ಮುಟ್ಟುವುದಿಲ್ಲ,” ಎಂದನು.

12 ಆದುದರಿಂದ ರಾಗುಯೇಲನು, “ಆಗಲಿ, ಮೋಶೆಯ ಗ್ರಂಥದಲ್ಲಿರುವ ನಿಯಮದ ಪ್ರಕಾರ ಆಕೆ ನಿನಗೇ ಮೀಸಲು. ಇದು ಪರಲೋಕದಲ್ಲೇ ನಿಶ್ಚಯವಾಗಿದೆ. ಇವಳು ನಿನ್ನ ಸಂಬಂಧಿಕಳು. ಇಂದಿನಿಂದ ಈಕೆ ನಿನ್ನವಳೇ, ನೀನು ಆಕೆಗೆ ಸೇರಿದವನೇ. ಇಂದಿಗೂ ಎಂದೆಂದಿಗೂ ಆಕೆ ನಿನ್ನ ಪತ್ನಿ. ಮಗೂ, ಪರಲೋಕದ ಸರ್ವೇಶ್ವರ ಈ ರಾತ್ರಿ ನಿಮ್ಮಿಬ್ಬರನ್ನೂ ಕಾಪಾಡಿ, ಮುನ್ನಡೆಸಲಿ; ಕರುಣೆಯನ್ನೂ ಶಾಂತಿಯನ್ನೂ ಅನುಗ್ರಹಿಸಲಿ!” ಎಂದನು.

## ವಿವಾಹ ಸಂಸ್ಕಾರ

13 ಬಳಿಕ ರಾಗುಯೇಲನು ತನ್ನ ಮಗಳನ್ನು ಕರೆಸಿದನು. ಅವಳು ಬಂದಾಗ, ಅವಳ ಕೈಹಿಡಿದು ತೊಬಿಯಾಸನಿಗೆ ಕೊಟ್ಟನು. “ಮೋಶೆಯ ಗ್ರಂಥದ ವಿಧಿನಿಯಮದ ಪ್ರಕಾರ ಈಕೆಯನ್ನು ನಿನ್ನ ಹೆಂಡತಿಯನ್ನಾಗಿ ಸ್ವೀಕರಿಸು. ನಿನ್ನ ತಂದೆಯ ಮನೆಗೆ ಸುರಕ್ಷಿತವಾಗಿ ಕರೆದುಕೊಂಡು ಹೋಗು. ಪರಲೋಕದ ದೇವರು ಸುಖಕರ ಪ್ರಯಾಣವನ್ನೂ ಶಾಂತಿಯನ್ನೂ ಅನುಗ್ರಹಿಸಲಿ!” ಎಂದು ಹಾರೈಸಿದನು.

14 ತದನಂತರ ಸಾರಳ ತಾಯಿಯನ್ನು ಕರೆದು, ಸುರುಳಿಯನ್ನು ತರುವಂತೆ ಆಜ್ಞಾಪಿಸಿದನು. ಅದರಲ್ಲಿ ಮೋಶೆಯ ಧರ್ಮಶಾಸ್ತ್ರದ ನಿಯಮಕ್ಕೆ ಅನುಸಾರ ಸಾರಳನ್ನು ತೊಬಿಯಾಸನಿಗೆ ಮದುವೆ ಮಾಡಿಕೊಡಲಾಗಿದೆ ಎಂಬ ವಿವಾಹ ಒಪ್ಪಂದವನ್ನು ಬರೆದುಕೊಟ್ಟನು.
15ಇದಾದ ನಂತರ ಅವರು ಅನ್ನಪಾನಗಳನ್ನು ಸ್ವೀಕರಿಸಲಾರಂಭಿಸಿದರು.

16 ರಾಗುಯೇಲನು ಪತ್ನಿ ಎಡ್ನಳನ್ನು ಕರೆದು, “ಪ್ರಿಯಳೇ, ಮತ್ತೊಂದು ಕೊಠಡಿಯನ್ನು ಸಿದ್ಧಗೊಳಿಸಿ ಸಾರಳನ್ನು ಅಲ್ಲಿಗೆ ಕರೆದುಕೊಂಡು ಹೋಗು,” ಎಂದನು.
17ಅಂತೆಯೇ ಎಡ್ನಳು ಹಾಸಿಗೆಯನ್ನು ಸಿದ್ಧಮಾಡಿ ಸಾರಳನ್ನು ಅಲ್ಲಿಗೆ ಕರೆದೊಯ್ದಳು. ತನ್ನ ಮಗಳಿಗಾಗಿ ಕಣ್ಣೀರು ಇಟ್ಟಳು. ಅನಂತರ ಕಣ್ಣುಗಳನ್ನು ಒರೆಸಿಕೊಂಡು ಹೀಗೆಂದಳು:
18“ಮಗಳೇ, ಎದೆಗುಂದಬೇಡ, ಪರಲೋಕದ ಸರ್ವೇಶ್ವರ ನಿನ್ನ ದುಃಖವನ್ನು ಸಂತೋಷವನ್ನಾಗಿ ಮಾರ್ಪಡಿಸಲಿ. ಮಗಳೇ, ಧೈರ್ಯದಿಂದಿರು!” ಹೀಗೆಂದ ಮೇಲೆ ಕೊಠಡಿಯಿಂದ ಹೊರಟುಹೋದಳು.

## ದೆವ್ವದ ಉಚ್ಚಾಟನೆ

**8** ಊಟೋಪಚಾರಗಳೆಲ್ಲ ಮುಗಿದ ನಂತರ, ಮಲಗುವ ಸಮಯದಲ್ಲಿ ತೊಬಿಯಾಸನನ್ನು ಶಯನದ ಕೊಠಡಿಗೆ ಕರೆತರಲಾಯಿತು. 2ಆಗ ರಫಯೇಲನ ಮಾತುಗಳು ತೊಬಿಯಾಸನ ನೆನಪಿಗೆ ಬಂದವು. ತನ್ನ ಚೀಲದಿಂದ ಮೀನಿನ ಹೃದಯ ಮತ್ತು ಯಕೃತ್ತನ್ನು ತೆಗೆದು ಉರಿಯುತ್ತಿದ್ದ ಧೂಪಕೆಂಡದ ಮೇಲೆ ಹಾಕಿದನು. 3ಅಲ್ಲಿಂದ ಹೊರಟ ಹೊಗೆಯ ದುರ್ವಾಸನೆ ದೆವ್ವಕ್ಕೆ ಹಿಡಿಸಲಿಲ್ಲ. ಅದನ್ನು ತಡೆಯಲಾರದೆ ಅದು ಈಜಿಪ್ಟಿನ ಕಟ್ಟಕಡೆಯವರೆಗೆ ಓಡಲಾರಂಭಿಸಿತು. ರಫಯೇಲನು ಕೂಡಲೆ ಅದನ್ನು ಹಿಮ್ಮೆಟ್ಟಿ, ಬಂಧಿಸಿ, ನಸುಕಿಹಾಕಿದನು.

## ತೊಬಿಯಾಸನ ಪ್ರಾರ್ಥನೆ

4 ಸಾರಳ ತಂದೆತಾಯಿಗಳು ಶಯನ ಕೊಠಡಿಯ ಬಾಗಿಲನ್ನು ಮುಚ್ಚಿ ಹೊರಟು ಹೋದ ಮೇಲೆ, ತೊಬಿಯಾಸನು ಹಾಸಿಗೆಯಿಂದೆದ್ದು ಸಾರಳನ್ನು ಉದ್ದೇಶಿಸಿ, “ಪ್ರಿಯಳೇ, ಎದ್ದೇಳು, ಪ್ರಾರ್ಥಿಸೋಣ; ನಮಗೆ ಕರುಣೆಯನ್ನೂ ರಕ್ಷಣೆಯನ್ನೂ ದಯಪಾಲಿಸಲೆಂದು ಸರ್ವೇಶ್ವರನನ್ನು ಬೇಡಿಕೊಳ್ಳೋಣ,” ಎಂದನು.
5ಸಾರಳು ಎದ್ದು ನಿಂತಳು. ಅವರಿಬ್ಬರೂ ಪ್ರಾರ್ಥನೆಮಾಡಿ, ಸರ್ವೇಶ್ವರ ತಮ್ಮನ್ನು ಸುರಕ್ಷಿತವಾಗಿಡುವಂತೆ ಬಿನ್ನಯಿಸಿಕೊಂಡರು. ತೊಬಿಯಾಸನು ಹೀಗೆಂದು ಪ್ರಾರ್ಥಿಸಿದನು:

“ನಮ್ಮ ಪೂರ್ವಜರ ದೇವರೇ, ನಿಮಗೆ
ಸ್ತುತಿಸ್ತೋತ್ರ!
ನಿಮ್ಮ ನಾಮವು ಯುಗಯುಗಾಂತರಕ್ಕೂ
ಪೂಜಿತ
ಸ್ವರ್ಗಲೋಕವು, ಸೃಷ್ಟಿಸಮಸ್ತವು ಸ್ತುತಿಸಲಿ
ನಿಮ್ಮನು ಸತತ.
6 “ಆದಾಮನನ್ನು ಸೃಷ್ಟಿಸಿದಾತ ನೀವೇ
ಆತನಿಗೆ ಹವ್ವಳನ್ನು ಸತಿಯಾಗಿ ಕೊಟ್ಟಿರಿ ನೀವೇ.
ಕೊಟ್ಟಿರಿ ಆಕೆಯನ್ನು ಸಹಾಯಕಳನ್ನಾಗಿ,
ಬೆಂಬಲವಾಗಿ.
ಉಗಮವಾಯಿತು ಮಾನವಕುಲ
ಇವರಿರ್ವರಿಂದಾಗಿ.
‘ಮನುಷ್ಯ ಒಂಟಿಯಾಗಿರುವುದು ಒಳಿತಲ್ಲ’
ಎಂದಿರಿ
ಅವನಿಗೆ ಸರಿಬೀಳುವ ಸಹಕಾರಿಯನ್ನು
ಸೃಷ್ಟಿಸಿಕೊಟ್ಟಿರಿ.
7 “ನಾನೀಗ ನನ್ನೀ ಸೋದರಿಯನ್ನು
ಸ್ವೀಕರಿಸುವುದು ಕಾಮತೃಪ್ತಿಗಾಗಿ ಅಲ್ಲ
ಧರ್ಮಾನುಸಾರಕ್ಕಾಗಿಯೇ ಹೌದು.
ದಯಮಾಡಿ ಕೃಪೆತೋರಿ ನಮಗೆ
ನಾವಿಬ್ಬರು ವೃದ್ಧಾಪ್ಯ ಹೊಂದುವವರೆಗೆ.”
8–9 ಈ ಪ್ರಾರ್ಥನೆಯ ಅಂತ್ಯದಲ್ಲಿ
ಅವರಿಬ್ಬರೂ ‘ಆಮೆನ್, ಆಮೆನ್,’ ಎಂದು
ಹೇಳಿ ಮಲಗಿಕೊಂಡರು.

**ಶಯನದಲ್ಲಿದ್ದವನಿಗೆ ಸಮಾಧಿ!**

ಅದೇ ರಾತ್ರಿ ರಾಗುಯೇಲನಾದರೋ ನಿದ್ದೆಯಿಂದೆದ್ದು, ತನ್ನ ಸೇವಕರನ್ನು ಕರೆದು, ಸಮಾಧಿಯನ್ನು
ಅಗೆಯಲು ಹೊರಗೆ ಹೋದನು. 10ಏಕೆಂದರೆ, "ತೊಬಿಯಾಸನು ಸಹ ಸಾಯಬಹುದು. ಜನರ ನಿಂದೆ
ಪರಿಹಾಸ್ಯಕ್ಕೆ ನಾವು ಮತ್ತೆ ಗುರಿಯಾಗಬಹುದು," ಎಂದುಕೊಂಡನು. 11ಸಮಾಧಿಯ ಗುಣಿ ಅಗೆದಾದ
ಮೇಲೆ, ರಾಗುಯೇಲನು ಮನೆಗೆ ಹೋಗಿ ತನ್ನ ಹೆಂಡತಿಯನ್ನು ಕರೆದು, 12"ದಾದಿಯರಲ್ಲಿ ಒಬ್ಬಳನ್ನು
ಕಳುಹಿಸು, ತೊಬಿಯಾಸನು ಸತ್ತಿರಬಹುದೇ ಎಂದು ನೋಡಿಕೊಂಡು ಬರಲಿ. ಸತ್ತಿದ್ದರೆ, ಯಾರಿಗೂ
ಗೊತ್ತಾಗದಂತೆ ಅವನನ್ನು ಸಮಾಧಿ ಮಾಡಿಬಿಡೋಣ," ಎಂದನು. 13ಅಂತೆಯೇ, ಅವರು
ದಾದಿಯೊಬ್ಬಳನ್ನು ಕಳುಹಿಸಿದರು. ದೀಪಹಚ್ಚಿ ಬಾಗಿಲು ತೆರೆದು, ಅವಳನ್ನು ಒಳಕ್ಕೆ ಬಿಟ್ಟರು. ಆಕೆ ಒಳಗೆ
ಹೋಗಿ ನೋಡಿದಾಗ ಅವರಿಬ್ಬರು ಹಾಯಾಗಿ ಮಲಗಿರುವುದನ್ನು ಕಂಡಳು. 14ಎಂದೇ ದಾದಿಯು ಹೊರಗೆ
ಬಂದು ತೊಬಿಯಾಸನು ಸುರಕ್ಷಿತ ವಾಗಿರುವುದಾಗಿ ರಾಗುಯೇಲನಿಗೂ ಎಡ್ನಳಿಗೂ ತಿಳಿಸಿದಳು. 15ಆಗ
ರಾಗುಯೇಲನು ಪರಲೋಕ ದೇವರನ್ನು ಹೀಗೆಂದು ಕೀರ್ತಿಸಿದನು:

**ರಾಗುಯೇಲನ ಪ್ರಾರ್ಥನೆ**

"ಸರ್ವೇಶ್ವರಾ, ನೀವು ಸ್ತುತ್ಯಾರ್ಹರು!
ಪ್ರತಿಯೊಂದು ಪೂಜ್ಯಸ್ತುತಿಗೆ ಪಾತ್ರರು
ಆಯ್ಕೆಯಾದ ಜನಾಂಗ ಸ್ತುತಿಸಲಿ
ನಿಮ್ಮನ್ನು ಎಂದೆಂದಿಗೂ !
16 "ನನ್ನನ್ನು ಸಂತೋಷಪಡಿಸಿದ್ದಕ್ಕಾಗಿ ನಿಮಗೆ
ಸ್ತೋತ್ರ !
ಜರುಗಲಿಲ್ಲ ನಾನು ಹೆದರಿದ ದುರಂತ
ನನಗೆಸಗಿರುವಿರಿ ನಿಮ್ಮ ಮಹಾಕೃಪಾನುಸಾರ.
17 "ಈಕೆ ಏಕಮಾತ್ರ ಪುತ್ರಿ; ಈತ ಏಕಮಾತ್ರ ಪುತ್ರ
ಇವರಿಗೆ ದಯೆತೋರಿದ ನಿಮಗೆ ಸ್ತುತಿಸ್ತೋತ್ರ!
ಗುರುದೇವಾ, ಅನುಗ್ರಹಿಸು ಇವರಿಗೆ
ಕೃಪಾಶ್ರಯ
ಪ್ರೀತ್ಯಾನಂದದಿಂದ ತುಂಬಿರಲಿ ಇವರ
ದಾಂಪತ್ಯ."
18 ರಾಗುಯೇಲನು ತಾನು ತೋಡಿದ್ದ ಗುಳಿಯನ್ನು ಮುಂಜಾನೆಯೇ ಮುಚ್ಚಿಬಿಟ್ಟನು.

**ವಿವಾಹ ಔತಣ**

19 ತರುವಾಯ ರಾಗುಯೇಲನು ಹಂಡೆ ತುಂಬ ರೊಟ್ಟಿಯನ್ನು ಸುಡುವಂತೆ ಹೆಂಡತಿಗೆ
ಆಜ್ಞಾಪಿಸಿದನು. ತಾನೇ ಮಂದೆಗೆ ಹೋಗಿ ಎರಡು ಹೋರಿಕರುಗಳನ್ನು, ನಾಲ್ಕು ಟಗರುಗಳನ್ನು ತಂದು
ಅಡಿಗೆ ಮಾಡಲು ಅಪ್ಪಣೆ ಕೊಟ್ಟನು. ಔತಣಕ್ಕೆ ಸಿದ್ಧತೆ ನಡೆಯಿತು. 20ಬಳಿಕ ತೊಬಿಯಾಸನನ್ನು ಕರೆದು:

"ಹದಿನಾಲ್ಕು ದಿನಗಳವರೆಗೆ ಇಲ್ಲಿಂದ ನೀನು ಹೋಗಕೂಡದು. ಇಲ್ಲೇ ಇದ್ದು ನನ್ನೊಡನೆ ಔತಣ
ಮಾಡಬೇಕು. ದುಃಖದಲ್ಲಿ ಮುಳುಗಿದ್ದ ನನ್ನ ಮಗಳನ್ನು ಸಂತೋಷಪಡಿಸಬೇಕು. 21ಆ ಬಳಿಕ ನನ್ನ
ಆಸ್ತಿಯಲ್ಲಿ ಅರ್ಧಭಾಗವನ್ನು ತೆಗೆದುಕೊಂಡು ಈಕೆಯನ್ನು ಸುರಕ್ಷಿತವಾಗಿ ನಿನ್ನ ತಂದೆಯ ಬಳಿಗೆ
ಕರೆದುಕೊಂಡು ಹೋಗು. ನಾನೂ ನನ್ನ ಹೆಂಡತಿಯೂ ತೀರಿಕೊಂಡ ಮೇಲೆ, ಉಳಿದ ಅರ್ಧಭಾಗವೂ
ನಿನ್ನದಾಗುವುದು. ಧೈರ್ಯವಾಗಿರು, ಮಗೂ, ನಾನು ನಿನ್ನ ತಂದೆ, ಎಡ್ನ ನಿನ್ನ ತಾಯಿ. ಸಾರಾ ನಮಗೆ
ಮಗಳಾಗಿರುವಂತೆ ನೀನೂ ನಮಗೆ ಇಂದಿಗೂ ಎಂದೆಂದಿಗೂ ಮಗನಾಗಿರುವೆ. ಮಗೂ, ಎದೆಗುಂದಬೇಡ!"
ಎಂದು ಪ್ರಮಾಣಪೂರ್ವಕವಾಗಿ ಹೇಳಿದನು.

## ರಾಗುಯೇಲನ ಮನೆಯಿಂದ ರ‍್ಹಾಜೆಸ್‌ಗೆ

**9** ತರುವಾಯ ತೊಬಿಯಾಸನು ರಫಯೇಲನನ್ನು ಕರೆದು, 2 “ಗೆಳೆಯ ಅಜರ್ಯನೇ, ನಿನ್ನ ಸಂಗಡ ನಾಲ್ಕು ಆಳುಗಳನ್ನೂ ಒಂಟೆಗಳನ್ನೂ ತೆಗೆದುಕೊಂಡು ರ‍್ಹಾಜೆಸ್‌ಗೆ ಹೋಗು. ಅಲ್ಲಿ ಗಬಯೇಲನ ಮನೆಗೆ ಹೋಗಿ, ಈ ಮುಚ್ಚಳಿಕೆಯನ್ನು ತೋರಿಸು. ಅವನಿಂದ ಹಣವನ್ನು ತೆಗೆದುಕೊಂಡು, ಈ ಮದುವೆಯ ಔತಣಕ್ಕೆ ಅವನನ್ನೂ ಕರೆದುಕೊಂಡು ಬಾ. 3ನಿನಗೆ ತಿಳಿದಿರುವಂತೆ ನನ್ನ ತಂದೆ ತನ್ನ ಜೀವಮಾನದ ದಿನಗಳನ್ನು ಎಣಿಕೆ ಮಾಡುತ್ತಿದ್ದಾರೆ. ನಾವು ಹಿಂದಿರುಗುವುದು ಒಂದು ದಿನ ತಡವಾದರೂ, ಅವರಿಗೆ ತುಂಬಾ ಕಳವಳ ಉಂಟಾಗುತ್ತದೆ. 4ಅದಲ್ಲದೆ, ರಾಗುಯೇಲನು ಮಾಡಿರುವ ಪ್ರಮಾಣಕ್ಕೆ ನೀನೇ ಸಾಕ್ಷಿ; ಅವನ ಪ್ರಮಾಣವನ್ನು ಮೀರಿ ನಾನು ಈಗ ಇಲ್ಲಿಂದ ಹೊರಡುವಂತಿಲ್ಲ,” ಎಂದನು.

5 ಅಂತೆಯೇ ರಫಯೇಲನು ನಾಲ್ಕು ಆಳುಗಳನ್ನೂ ಎರಡು ಒಂಟೆಗಳನ್ನೂ ತೆಗೆದುಕೊಂಡು, ಮೇದ್ಯದಲ್ಲಿರುವ ರ‍್ಹಾಜೆಸ್‌ಗೆ ತೆರಳಿ, ಗಬಯೇಲನ ಮನೆಯಲ್ಲಿ ತಂಗಿದನು. ರಫಯೇಲನು ತಾನು ತಂದ ಮುಚ್ಚಳಿಕೆಯನ್ನು ಕೊಟ್ಟು, ತೊಬೀತನ ಮಗ ತೊಬಿಯಾಸನಿಗೆ ಮದುವೆಯಾಗಿದೆ, ಮದುವೆಯ ಔತಣಕ್ಕೆ ಬರಬೇಕೆಂದು ಗಬಯೇಲನು ಮುದ್ರೆಹಾಕಿದ ಹಣದ ಚೀಲಗಳನ್ನು ಅವನಿಗೆ ಎಣಿಸಿಕೊಟ್ಟನು. ಚೀಲಗಳನ್ನು ಒಂಟೆಗಳ ಮೇಲೆ ಹೇರಲಾಯಿತು. 6ಮುಂಜಾನೆ ಅವರಿಬ್ಬರೂ ಎದ್ದು ಔತಣಕೂಟಕ್ಕೆಂದು ರಾಗುಯೇಲನ ಮನೆಗೆ ಬಂದರು. ಅವರು ರಾಗುಯೇಲನ ಮನೆಯನ್ನು ತಲುಪಿದಾಗ ತೊಬಿಯಾಸನು ಊಟಕ್ಕೆ ಕುಳಿತಿರುವುದನ್ನು ಕಂಡರು. ತೊಬಿಯಾಸನು ತಕ್ಷಣವೇ ಎದ್ದು ಗಬಯೇಲನನ್ನು ವಂದಿಸಿದನು. ಗಬಯೇಲನು ಕಣ್ಣೀರು ಸುರಿಸುತ್ತಾ, “ನಿನ್ನ ತಂದೆ ಸಭ್ಯ, ಸದ್ಗುಣಶೀಲ, ನೀತಿವಂತ, ಪರೋಪಕಾರಿ, ಅಂಥ ತಂದೆಗೆ ನೀನು ತಕ್ಕ ಮಗ; ನಿನಗೆ, ನಿನ್ನ ಪತ್ನಿಗೆ, ನಿನ್ನ ಅತ್ತೆ ಮಾವಂದಿರಿಗೆ ದೇವರು ತಮ್ಮ ಆಶೀರ್ವಾದಗಳನ್ನು ಅನುಗ್ರಹಿಸಲಿ! ನನ್ನ ನೆಂಟ ತೊಬೀತನ ಪ್ರತಿಬಿಂಬವನ್ನೇ ನಿನ್ನಲ್ಲಿ ಕಾಣುತ್ತಿದ್ದೇನೆ. ದೇವರಿಗೆ ಸ್ತುತಿಯಾಗಲಿ!” ಎಂದು ಅವನನ್ನು ಆಶೀರ್ವದಿಸಿದನು.

## ತೊಬೀತ್ ಮತ್ತು ಅನ್ನಳ ಪೇಚಾಟ

**10** ಅತ್ತ ತೊಬೀತನು, ಮಗ ತೊಬಿಯಾಸನು ಪ್ರಯಾಣ ಮುಗಿಸಿ ಹಿಂದಿರುಗುವುದಕ್ಕೆ ಎಷ್ಟು ದಿನಗಳು ಹಿಡಿಯುತ್ತವೆಂದು ಲೆಕ್ಕಹಾಕುತ್ತಿದ್ದನು. ಅವನ ಲೆಕ್ಕಾಚಾರದ ಪ್ರಕಾರ ತೊಬಿಯಾಸನು ಹಿಂದಿರುಗದೆ ಹೋಗಿದ್ದರಿಂದ, 2“ತೊಬಿಯಾಸನನ್ನು ಅವರು ತಡೆಗಟ್ಟಿರಬಹುದೇ? ಗಬಯೇಲನೇನಾದರು ಸತ್ತು ಹೋಗಿರಬಹುದೇ? ಹಣವನ್ನು ಹಿಂದಿರುಗಿಸಲು ಯಾರೂ ಇಲ್ಲದಿರಬಹುದೇ?” 3ಎಂದೆಲ್ಲ ಚಿಂತಿಸ ತೊಡಗಿದನು.

4 ಅವನ ಹೆಂಡತಿ ಅನ್ನಳಾದರೋ, “ನನ್ನ ಕಂದ ಸತ್ತೇ ಹೋಗಿದ್ದಾನೆ, ಅವನು ಬದುಕಿದಂತಿಲ್ಲ,” ಎಂದು ದುಃಖಿಸಿ ರೋದಿಸತೊಡಗಿದಳು. 5“ಅಯ್ಯೋ ಕಂದಾ; ನನ್ನ ಕಣ್ಮಣಿಯೇ; ನಿನ್ನನ್ನೇಕೆ ಹೋಗಲು ಬಿಟ್ಟೆ? ನನ್ನದೇ ತಪ್ಪು” ಎಂದು ಅತ್ತಳು.

6 ಆಗ ತೊಬೀತನು ಅವಳಿಗೆ, “ಪ್ರಿಯಳೇ, ಸುಮ್ಮನಿರು, ಚಿಂತೆಪಡಬೇಡ. ಅವನು ಸುಖವಾಗಿದ್ದಾನೆ. ಬಹುಶಃ ಅಲ್ಲಿ ಏನೋ ಅನಿರೀಕ್ಷಿತವಾಗಿ ನಡೆದಿರಬೇಕು. ಅವನ ಜೊತೆಹೋಗಿದ್ದ ವ್ಯಕ್ತಿ ನಂಬಿಗಸ್ಥ, ನಮ್ಮ ಸಂಬಂಧಿಕ. ಆದ್ದರಿಂದ ಪ್ರಿಯಳೇ, ಅಳಬೇಡ; ಅವನು ಬೇಗ ಹಿಂದಿರುಗುತ್ತಾನೆ,” ಎಂದು ಸಮಾಧಾನ ಪಡಿಸಿದನು.

7 ಆದರೆ ಅನ್ನಳು, “ನೀವು ಸುಮ್ಮನಿರಿ, ನೆಪಹೇಳಬೇಡಿ; ನನ್ನ ಕಂದ ಖಂಡಿತವಾಗಿ ಸತ್ತಿದ್ದಾನೆ,” ಎಂದು ವಾದಿಸಿದಳು. ಪ್ರತಿದಿನ ಹೊರಗೆ ಹೋಗಿ ಮಗನು ಹೋದ ಹಾದಿಯನ್ನೇ ನೋಡಿ, ಅವನಿಗಾಗಿ ಕಾಯುತ್ತಿದ್ದಳು. ಯಾರೂ ಅವಳಿಗೆ ಸಮಾಧಾನ ಹೇಳುವಂತಿರಲಿಲ್ಲ. ಹೊತ್ತು ಮುಳುಗಿದ ನಂತರ ಮನೆಯೊಳಕ್ಕೆ ಬಂದು ರಾತ್ರಿಯೆಲ್ಲಾ ನಿದ್ದೆಗೆಟ್ಟು ದುಃಖಿಸುತ್ತಿದ್ದಳು.

## ಎಕ್‌ಬತಾನ ನಗರದಿಂದ ಮರುಪ್ರಯಾಣ

ಇತ್ತ ತನ್ನ ಮಗಳ ವಿವಾಹ ಔತಣಕ್ಕೆಂದು ರಾಗುಯೇಲನು ಪ್ರಮಾಣಪೂರ್ವಕವಾಗಿ ನಿಗದಿ
ಮಾಡಿದ್ದ ಎರಡು ವಾರದ ಸಮಾರಂಭದ ದಿನಗಳು ಮುಗಿದವು. ಆಗ ತೊಬಿಯಾಸನು ತನ್ನ ಮಾವನ
ಬಳಿಗೆ ಬಂದು, "ದಯವಿಟ್ಟು ನನ್ನನ್ನು ಕಳುಹಿಸಿಕೊಡಿ. ನನ್ನ ತಂದೆತಾಯಿಗಳು ನನ್ನನ್ನು ನೋಡುವ
ಆಶೆಯನ್ನೇ ಕಳೆದುಕೊಂಡಿರಬೇಕು. ಆದ್ದರಿಂದ, ದಯವಿಟ್ಟು ತಂದೆಯ ಬಳಿಗೆ ಹೋಗಲು ನೀವು ಅಪ್ಪಣೆ
ಕೊಡಬೇಕು. ನಾನು ಯಾವ ಪರಿಸ್ಥಿತಿಯಲ್ಲಿ ಅವರನ್ನು ಬಿಟ್ಟುಬಂದೆನು ಎಂದು ಈಗಾಗಲೇ ನಿಮಗೆ
ವಿವರಿಸಿದ್ದೇನೆ," ಎಂದನು.

8 ಆದರೆ ರಾಗುಯೇಲನು, "ಇರು ಮಗೂ, ನನ್ನ ಬಳಿಯಲ್ಲೇ ಇರು. ಬೇಕಾದರೆ ನಿನ್ನ ತಂದೆಯ
ಬಳಿಗೆ ಆಳುಗಳನ್ನು ಕಳುಹಿಸಿ, ಎಲ್ಲಾ ವಿಷಯಗಳನ್ನು ತಿಳಿಯಪಡಿಸುತ್ತೇನೆ," ಎಂದನು.

9 ಅದಕ್ಕೆ ತೊಬಿಯಾಸನು, "ಇಲ್ಲ, ನಾನು ಇರಲಾಗದು, ದಯವಿಟ್ಟು, ನನ್ನನ್ನು ತಂದೆಯ ಬಳಿಗೆ
ಕಳುಹಿಸಿಕೊಡಿ," ಎಂದು ಒತ್ತಾಯಿಸಿದನು.

10 ಆದುದರಿಂದ ರಾಗುಯೇಲನು ತಡಮಾಡದೆ ಸಾರಳನ್ನೂ ತನ್ನ ಆಸ್ತಿಯ ಅರ್ಧಭಾಗವನ್ನೂ
ತೊಬಿಯಾಸನಿಗೆ ಒಪ್ಪಿಸಿದನು. ದಾಸ ದಾಸಿಯರು, ದನಕುರಿಗಳು, ಒಂಟೆಕತ್ತೆಗಳು, ಬಟ್ಟೆಬರೆ, ಹಣಕಾಸು,
ಮತ್ತಿತರ ಸಾಮಾನುಗಳನ್ನೂ ಅವನಿಗೆ ಕೊಟ್ಟನು. 11ಅವರನ್ನು ಸುರಕ್ಷಿತವಾಗಿ ಕಳುಹಿಸಿಕೊಡುತ್ತಾ
ತೊಬಿಯಾಸನನ್ನು ತಬ್ಬಿಕೊಂಡು ಹೀಗೆಂದನು: "ಹೋಗಿ ಬಾ ಮಗು, ನಿನ್ನ ಪ್ರಯಾಣ ಸುರಕ್ಷಿತವಾಗಿರಲಿ.
ಪರಲೋಕದಲ್ಲಿರುವ ಸರ್ವೇಶ್ವರ ನಿನ್ನನ್ನೂ ನಿನ್ನ ಹೆಂಡತಿ ಸಾರಳನ್ನೂ ಹೇರಳವಾಗಿ ಆಶೀರ್ವದಿಸಲಿ!
ನಾನು ಸಾಯುವುದಕ್ಕೆ ಮುಂಚೆ ನಿನ್ನ ಮಕ್ಕಳನ್ನು ನೋಡುವ ಭಾಗ್ಯ ದೊರಕಲಿ," ಎಂದನು. 12ಬಳಿಕ ತನ್ನ
ಮಗಳು ಸಾರಳಿಗೆ ಮುತ್ತಿಟ್ಟು, "ಮಗಳೇ, ಹೋಗಿ ಬಾ, ನಿನ್ನ ಅತ್ತೆ ಮಾವಂದಿರನ್ನು ಗೌರವಿಸು. ಇಂದಿನಿಂದ
ಅವರೇ ನಿನ್ನ ತಂದೆತಾಯಿ. ನಾನು ಸಾಯುವವರೆಗೂ ನಿನ್ನ ಬಗ್ಗೆ ಶುಭಸಮಾಚಾರವನ್ನೇ ನಾನು
ಕೇಳುವಂತಾಗಲಿ. ಸಮಾಧಾನದಿಂದ ಹೋಗಿ ಬಾ, ಮಗಳೇ," ಎಂದನು.

ಬಳಿಕ ಎಡ್ನ ತೊಬಿಯಾಸನಿಗೆ, "ಮಗೂ, ಸ್ವರ್ಗದಲ್ಲಿರುವ ಸರ್ವೇಶ್ವರ ನಿನ್ನನ್ನು ಸುರಕ್ಷಿತವಾಗಿ
ಮನೆಗೆ ಕೊಂಡೊಯ್ಯಲಿ. ನಾನು ಸಾಯುವ ಮುಂಚೆ ಮಕ್ಕಳನ್ನು ನೋಡುವ ಭಾಗ್ಯ ನನ್ನದಾಗಲಿ. ದೇವರ
ಸನ್ನಿಧಿಯಲ್ಲಿ ಮಗಳನ್ನು ನಿನ್ನ ವಶಕ್ಕೆ ಒಪ್ಪಿಸುತ್ತಿದ್ದೇನೆ. ಜೀವಮಾನದಲ್ಲೆಲ್ಲ ಅವಳ ಮನಸ್ಸನ್ನು
ನೋಯಿಸಬೇಡ. ಇಂದಿನಿಂದ ಸಾರ ನಿನ್ನ ಹೆಂಡತಿ, ನಾನು ನಿನ್ನ ತಾಯಿ; ನಾವೆಲ್ಲರು ಜೀವಮಾನ
ಪರ್ಯಂತ ಸುಖಸಂತೋಷದಿಂದ ಇರುವಂತಾಗಲಿ. ಸಮಾಧಾನದಿಂದ ಹೋಗಿ ಬಾ, ಮಗನೇ," ಎಂದಳು.
ಬಳಿಕ ಎಡ್ನಳು ಅವರಿಬ್ಬರಿಗೂ ಮುತ್ತಿಟ್ಟು, "ಸುರಕ್ಷಿತವಾಗಿ ಹೋಗಿ ಬನ್ನಿ!" ಎಂದು ಬೀಳ್ಕೊಟ್ಟಳು.

13 ತೊಬಿಯಾಸನು ಅಲ್ಲಿಂದ ಹೊರಡುವಾಗ ಸಂತೋಷದಿಂದ ಭೂಪರಗಳ ಒಡೆಯರಾದ
ಸರ್ವೇಶ್ವರನ ಸ್ತುತಿ ಮಾಡಿದನು. ರಾಜಾಧಿರಾಜರಾದ ದೇವರಿಗೆ ಧನ್ಯವಾದಗಳನ್ನು ಸಲ್ಲಿಸಿದನು. ಕಾರಣ,
ಅವರ ಪ್ರಯಾಣ ಯಶಸ್ವಿ ಆಗಿತ್ತು. ಆತನ ಪತ್ನಿ ಎಡ್ನಳಿಗೆ ವಂದನೆ ಸಲ್ಲಿಸುತ್ತಾ, "ನನ್ನ ಜೀವಮಾನ
ಪರ್ಯಂತ ನಿಮ್ಮನ್ನು ಗೌರವಿಸುವುದೇ ನನ್ನ ಭಾಗ್ಯ!" ಎಂದನು. ಅಂತಿಮವಾಗಿ ಸಂತೋಷದಿಂದ ಅವರನ್ನು
ಬೀಳ್ಕೊಟ್ಟನು.

## ಮರಳಿ ಮನೆಗೆ

**11** ಅವರು ಪ್ರಯಾಣ ಮಾಡುತ್ತಾ ನಿನೆವೆ ನಗರಕ್ಕೆ ಎದುರಾಗಿದ್ದ ಕಸೆರೀನ್ ಪಟ್ಟಣಕ್ಕೆ ಬಂದರು. 2ಅಲ್ಲಿ
ರಫಯೇಲನು, ತೊಬಿಯಾಸನಿಗೆ, "ಗೆಳೆಯಾ, ನಾವು ನಿನ್ನ ತಂದೆಯನ್ನು ಯಾವ ಸ್ಥಿತಿಯಲ್ಲಿ ಬಿಟ್ಟು
ಬಂದೆವೆಂದು ನಿನಗೆ ಗೊತ್ತಿದೆಯಲ್ಲವೆ? 3ಆದ್ದರಿಂದ ಇವರೆಲ್ಲರಿಗೂ ಮುಂಚಿತವಾಗಿ ನಾವಿಬ್ಬರು ತ್ವರೆಮಾಡಿ
ಹೋಗೋಣ," ಎಂದನು. 4ಮುಂದಾಗಿ ಹೊರಡುವಾಗ ರಫಯೇಲನು, "ಮೀನಿನ ಪಿತ್ತಕೋಶ ನಿನ್ನ ಬಳಿ
ಇದೆ ತಾನೆ?" ಎಂದು ನಿಗದಿ ಮಾಡಿಕೊಂಡನು. ನಾಯಿ ಅವರನ್ನು ಹಿಂಬಾಲಿಸಿತು. 5ಇತ್ತ ಅನ್ನಳು,
ಮಗನು ಬರುವ ದಾರಿಯನ್ನೇ ಕಾಯುತ್ತ ಕುಳಿತಿದ್ದಳು. 6ತೊಬಿಯಾಸನು ಬರುತ್ತಿರುವುದನ್ನು ಕಂಡಕೂಡಲೇ

ತೊಬೀತನಿಗೆ, "ಇಗೋ, ನಮ್ಮ ಮಗ ಬರುತ್ತಿದ್ದಾನೆ. ಅವನೊಡನೆ ಹೋಗಿದ್ದ ವ್ಯಕ್ತಿ ಸಹ ಬರುತ್ತಿದ್ದಾನೆ," ಎಂದಳು.

7 ಮನೆಯನ್ನು ಸೇರುವ ಮುಂಚೆ ರಫಯೇಲನು ತೊಬಿಯಾಸನಿಗೆ, "ನಿನ್ನ ತಂದೆಯ ಕಣ್ಣುಗಳು ತೆರೆಯುವುವು. 8ಮೀನಿನ ಪಿತ್ತರಸವನ್ನು ಅವನ ಕಣ್ಣುಗಳಿಗೆ ಹಚ್ಚು. ಈ ಔಷಧ ಅವನ ಕಣ್ಣುಗಳ ಬಿಳಿ ಮಚ್ಚೆಯನ್ನು ಒಣಗಿಸಿ, ಸುಲಿದುಬಿಡುತ್ತದೆ. 9ನಿನ್ನ ತಂದೆ ದೃಷ್ಟಿಪಡೆದು ಬೆಳಕನ್ನು ನೋಡುವನು," ಎಂದನು.

## ತೊಬೀತನಿಗೆ ಮರುಕಳಿಸಿದ ದೃಷ್ಟಿ

10 ತೊಬೀತನು ತಡವರಿಸುತ್ತಾ ಅಂಗಳದ ಬಾಗಿಲಿನ ಹೊರಗೆ ಬಂದನು. 11ತೊಬಿಯಾಸನು ಅವನ ಬಳಿಗೆ ಧಾವಿಸಿದನು. (ಮೀನಿನ ಪಿತ್ತರಸ ಅವನ ಕೈಯಲ್ಲಿತ್ತು). ತಂದೆಯನ್ನು ಬಿಗಿಯಾಗಿ ಹಿಡಿದು ಅವನ ಕಣ್ಣುಗಳನ್ನು ಊದಿ, "ಅಪ್ಪಾ, ಧೈರ್ಯವಾಗಿರು" ಎಂದು ಹೇಳಿ, ಕಣ್ಣುಗಳಿಗೆ ಆ ಔಷಧವನ್ನು ಹಚ್ಚಿದನು. 12ಅವನ ಕಣ್ಣುಗಳು ಉರಿಯತೊಡಗಿದವು. 13ಅನಂತರ ತನ್ನ ಎರಡು ಕೈಗಳಿಂದ ಆ ಬಿಳಿಮಚ್ಚೆಯನ್ನು ಅವನ ಕಣ್ಣುಗಳ ಕೊನೆಯಿಂದ ಸುಲಿದುಬಿಟ್ಟನು. ಆಗ ತೊಬೀತನಿಗೆ ಕಣ್ಣು ಕಾಣಿಸಿತು. 14ಅವನು ಮಗನನ್ನು ಎರಡು ಕೈಗಳಿಂದ ತಬ್ಬಿಕೊಂಡು ಅಳುತ್ತಾ, "ಮಗನೇ, ನನ್ನ ಕಣ್ಣುಗಳಿಗೆ ನೀನು ಕಾಣಿಸುತ್ತಿದ್ದಿಯೇ; ನೀನೇ ನನ್ನ ಕಣ್ಣುಗಳಿಗೆ ಬೆಳಕು!" ಎಂದನು. ಅನಂತರ ಹೀಗೆ ನುಡಿದನು:

"ದೇವರಿಗೆ ಸ್ತುತಿಸ್ತೋತ್ರ! ಅವರ ಮಹಿಮಾ
ನಾಮ ಪೂಜಿತ
ಅವರ ಪೂಜ್ಯ ದೂತರೆಲ್ಲರಿಗೆ ಸ್ತೋತ್ರ!
ಯುಗಯುಗಾಂತರಕ್ಕೂ ಅವರ
ಶ್ರೀನಾಮ ಪೂಜಿತ.

15 "ಅವರೆನಗೆ ನೀಡಿದ್ದರು ಯಾತನೆ
ಈಗಲಾದರೂ ತೋರಿದರು ಕರುಣೆ
ಕಾಣುತ್ತಿರುವನು ನನ್ನ ಮಗ
ತೊಬಿಯನೆ!"

ಹೀಗೆ ತೊಬೀತನು ಸಂತೋಷದಿಂದ ಘಂಟಾಘೋಷವಾಗಿ ದೇವರನ್ನು ಸ್ತುತಿಸುತ್ತಾ ಮನೆಯೊಳಕ್ಕೆ ಹೋದನು. ತೊಬಿಯಾಸನು ತನ್ನ ಪ್ರಯಾಣ ಯಶಸ್ವಿಯಾದುದನ್ನು ಕುರಿತು ವರದಿ ಮಾಡಿದನು. ತಾನು ಹಣವನ್ನು ಮರಳಿ ತಂದುದು ಮಾತ್ರವಲ್ಲ, ಸಾರಳೊಡನೆ ಮದುವೆಯಾದುದು ಹಾಗೂ ಆಕೆ ನಿನೆವೆ ನಗರದ ಬಾಗಿಲ ಬಳಿ ಬರುತ್ತಿರುವುದು, ಇದೆಲ್ಲದರ ಬಗ್ಗೆ ವಿವರಿಸಿದನು.

## ಸಾರಳ ಆಗಮನ

16 ತೊಬೀತನು ನಿನೆವೆ ನಗರದ ಬಾಗಿಲ ಬಳಿ ಬರುತ್ತಿದ್ದ ತನ್ನ ಸೊಸೆಯನ್ನು ಎದುರುಗೊಳ್ಳಲು ಸಂತೋಷದಿಂದ ದೇವರನ್ನು ಸ್ತುತಿಸುತ್ತಾ ಹೋದನು. ಅವನು ಯಾರ ಸಹಾಯವಿಲ್ಲದೆ ತಾನಾಗಿಯೇ ಉತ್ಸಾಹದಿಂದ ನಡೆದು ಬರುತ್ತಿರುವುದನ್ನು ಕಂಡು ನಿನೆವೆಯ ನಿವಾಸಿಗಳು ನಿಬ್ಬೆರಗಾದರು. 17ದೇವರೇ ಕರುಣೆಯಿಟ್ಟು ದೃಷ್ಟಿಯನ್ನು ದಯಪಾಲಿಸಿದರೆಂಬುದನ್ನು ಅವರಿಗೆ ಬಹಿರಂಗಪಡಿಸಿದನು.

ತೊಬಿಯಾಸನ ಸತಿ ಸಾರಳನ್ನು ತೊಬೀತನು ಎದುರುಗೊಂಡಾಗ, "ಬಾ ಮಗಳೇ, ಸಂತೋಷದಿಂದ ಬಾ. ನಿನ್ನನ್ನು ನಮಗೆ ಕೊಟ್ಟ ದೇವರಿಗೆ ಸ್ತುತಿಸ್ತೋತ್ರ ಸಲ್ಲಲಿ! ಮಗಳೇ, ನಿನ್ನ ತಂದೆ ತಾಯಿ, ನನ್ನ ಮಗ ತೊಬಿಯಾಸ್ ಹಾಗೂ ನೀನು ಎಲ್ಲರೂ ನಿಜವಾಗಿ ಧನ್ಯರೇ. ಈಗ ನಿನ್ನ ಹೊಸ ಮನೆಗೆ ಬಾ. ನಿನಗೆ ಸುಸ್ವಾಗತ; ಸಂತೋಷ ಸೌಭಾಗ್ಯ ನಿನ್ನದಾಗಲಿ. ಬಾ ಮಗಳೇ, ಬಾ!" ಎಂದು ಸ್ವಾಗತಿಸಿದನು.

ನಿನೆವೆ ನಗರದಲ್ಲಿದ್ದ ಯೆಹೂದ್ಯರೆಲ್ಲರಿಗೆ ಅದೊಂದು ಸಂತೋಷ ಹಾಗೂ ಸಂಭ್ರಮದ ದಿನವಾಗಿತ್ತು. 18ತೊಬಿಯಾಸನ ವಿವಾಹ ಮಹೋತ್ಸವವನ್ನು ಏಳುದಿನದವರೆಗೂ ಕೊಂಡಾಡಿದರು. ಅವನಿಗೆ ಹಲವಾರು ಕೊಡುಗೆಗಳು ಲಭಿಸಿದವು.

## ರಫಯೇಲನ ಸಹಜ ವ್ಯಕ್ತಿತ್ವ

**12** ವಿವಾಹ ಮಹೋತ್ಸವ ಮುಗಿದ ಮೇಲೆ ತೊಬೀತನು ತನ್ನ ಮಗ ತೊಬಿಯಾಸನನ್ನು ಕರೆದು, "ಮಗನೇ, ನಿನ್ನ ಸಹಪ್ರಯಾಣಿಕನಿಗೆ ಸಲ್ಲಿಸಬೇಕಾದ ಹಣವನ್ನು ಗಮನಿಸು; ಒಪ್ಪಿಕೊಂಡದ್ದಕ್ಕೂ ಹೆಚ್ಚಾಗಿ ಕೊಡು," ಎಂದು ಆಜ್ಞಾಪಿಸಿದನು.

2 ಅದಕ್ಕೆ ತೊಬಿಯಾಸನು, "ಅಪ್ಪಾ, ಅವನಿಗೆ ಎಷ್ಟು ಕೊಡಲಿ? ನಾನು ತಂದ ಆಸ್ತಿಯಲ್ಲಿ
ಅರ್ಧಭಾಗವನ್ನು ಕೊಟ್ಟರೂ ಅಧಿಕವಾಗದು. 3ಆತನು ನನ್ನನ್ನು ನಿಮ್ಮ ಬಳಿಗೆ ಸುರಕ್ಷಿತವಾಗಿ ಕರೆತಂದಿದ್ದಾನೆ;
ನನ್ನ ಹೆಂಡತಿಯನ್ನು ಗುಣಪಡಿಸಿದ್ದಾನೆ; (ರಾಗುಯೇಲನಿಂದ) ಹಣವನ್ನು ಪಡೆದುತಂದಿದ್ದಾನೆ; ಅಷ್ಟೇ ಅಲ್ಲ,
ಈಗ ನಿಮ್ಮನ್ನು ಸಹ ಸ್ವಸ್ಥಪಡಿಸಿದ್ದಾನೆ. ಎಷ್ಟು ಹೆಚ್ಚುವರಿ ಹಣ ಕೊಡಬೇಕು? ಹೇಳಿ," ಎಂದು ಕೇಳಿದನು.

4 ಅದಕ್ಕೆ ತೊಬೀತನು, "ಮಗನೇ, ಅವನು ಮರಳಿ ತಂದಿರುವ ಎಲ್ಲದರಲ್ಲೂ ಅರ್ಧಭಾಗ
ಪಡೆಯಲು ಅರ್ಹನು," ಎಂದನು. 5ಅಂತೆಯೇ ತೊಬಿಯಾಸನು ರಫಯೇಲನನ್ನು ಕರೆದು, "ಇಗೋ,
ನೀನು ತಂದಿರುವ ಎಲ್ಲಾ ವಸ್ತುಗಳಲ್ಲಿ ಅರ್ಧಭಾಗವನ್ನು ಸಂಭಾವನೆಯಾಗಿ ತೆಗೆದುಕೊ, ಸಂತೋಷದಿಂದ
ಹೋಗಿ ಬಾ," ಎಂದನು.

## ದಾನವೇ ಧರ್ಮದ ಮೂಲ

6 ಆಗ ರಫಯೇಲನು ತಂದೆ ಮಗ ಇಬ್ಬರನ್ನೂ ಪಕ್ಕಕ್ಕೆ ಕರೆದು, ಇಂತೆಂದನು: "ಎಲ್ಲಾ ಜೀವಿಗಳ ಮುಂದೆ ದೇವರು ನಿಮಗೆ ಮಾಡಿರುವ ಸಕಲ ಉಪಕಾರಗಳಿಗಾಗಿ ಕೃತಜ್ಞತಾಸ್ತುತಿಯನ್ನು ಸಲ್ಲಿಸಿರಿ. ಅವರ ನಾಮವನ್ನು ಭಜಿಸಿ ಹಾಡಿರಿ. ದೇವರ ಮಹತ್ಕಾರ್ಯಗಳನ್ನು ಎಲ್ಲಾ ಜನರಿಗೆ ಪ್ರಕಟಿಸಿರಿ. ಅವರಿಗೆ ವಂದನೆಯನ್ನು ಸಲ್ಲಿಸುವುದರಲ್ಲಿ ಹಿಂದಾಗಬೇಡಿ.

7 "ರಾಜರುಗಳ ಗುಟ್ಟನ್ನು ಬಚ್ಚಿಡುವುದು ಸರಿಯಷ್ಟೆ. ಆದರೆ, ದೇವರ ಮಹತ್ಕಾರ್ಯಗಳನ್ನು ಒಪ್ಪಿಕೊಂಡು ತಕ್ಕ ಮರ್ಯಾದೆಯಿಂದ ಪ್ರಕಟಿಸುವುದು ಉಚಿತ. ಒಳಿತನ್ನು ಮಾಡುವವರ ಮೇಲೆ ಕೆಡುಕು ಜಯಗಳಿಸದು.

8 "ಜಪತಪ, ಉಪವಾಸವ್ರತ ಇದೆಲ್ಲಾ ಒಳ್ಳೆಯದೇ. ಆದರೆ ನ್ಯಾಯನೀತಿ, ದಾನಧರ್ಮ
ಅದಕ್ಕಿಂತಲೂ ಮೇಲಾದುದು! ಅನ್ಯಾಯದಿಂದ ಕೂಡಿದ ಅತುಳೈಶ್ವರ್ಯಕ್ಕಿಂತ ನೀತಿಯಿಂದ ಕೂಡಿದ
ಕಿಂಚಿತ್ತು ಲೇಸು. ಬೆಳ್ಳಿಬಂಗಾರವನ್ನು ಕೂಡಿಸಿಡುವುದಕ್ಕಿಂತ ದಾನಧರ್ಮ ಮಾಡುವುದು ಲೇಸು. 9ಏಕೆಂದರೆ
ದಾನಧರ್ಮವು ಮರಣದಿಂದ ರಕ್ಷಿಸುತ್ತದೆ, ಪಾಪದಿಂದ ಶುದ್ಧೀಕರಿಸುತ್ತದೆ. ದಾನಮಾಡುವವರ ಜೀವನ
ಸೌಭಾಗ್ಯ ತುಂಬಿದ ಜೀವನ. 10ಪಾಪಮಾಡುವವರು, ಕೇಡುಮಾಡುವವರು ತಮಗೆ ತಾವೇ ಕಟು
ವಿರೋಧಿಗಳು.

11 "ನಾನೀಗ ನಿಮಗೆ ಮುಚ್ಚುಮರೆ ಇಲ್ಲದೆ ಸತ್ಯಾಂಶವನ್ನು ಬಯಲು ಮಾಡುತ್ತೇನೆ. ಈಗಾಗಲೇ
ನಾನು ನಿಮಗೆ ಸ್ಪಷ್ಟಪಡಿಸಿರುವಂತೆ, ರಾಜನ ಗುಟ್ಟನ್ನು ಬಚ್ಚಿಡುವುದೇನೋ ಸರಿಯಷ್ಟೆ. ಆದರೆ ದೇವರ
ಮಹತ್ಕಾರ್ಯಗಳನ್ನು ತಕ್ಕ ಮರ್ಯಾದೆಯಿಂದ ಪ್ರಕಟಿಸಬೇಕು. 12ಅಂತೆಯೇ, ನೀನೂ ಮತ್ತು ಸಾರಲೂ
ಪ್ರಾರ್ಥನೆ ಮಾಡಿದಾಗ, ಸತ್ತವರನ್ನು ನೀನು ಸಮಾಧಿ ಮಾಡಿದಾಗ, ಮಹಿಮಾಭರಿತ ಸರ್ವೇಶ್ವರನ
ಸಮ್ಮುಖದಲ್ಲಿ ಅದನ್ನು ವರದಿಮಾಡಿದವನು ನಾನೇ. 13ಅಂತೆಯೇ ನಿನ್ನ ಊಟವನ್ನು ಬಿಟ್ಟು, ಎದ್ದು ಹೋಗಿ
ಸತ್ತವನನ್ನು ಸಮಾಧಿಮಾಡಿದಾಗ ನಿನ್ನನ್ನು ಪರೀಕ್ಷಿಸಲು ಕಳುಹಿಸಲಾದವನು ನಾನೇ. 14ಅದೇ ಪ್ರಕಾರ,
ನಿನ್ನನ್ನೂ ನಿನ್ನ ಸೊಸೆ ಸಾರಳನ್ನೂ ಗುಣಪಡಿಸಲು ದೇವರೇ ನನ್ನನ್ನು ಕಳುಹಿಸಿದರು. 15ನಾನೇ ರಫಯೇಲ್.
ಮಹಿಮಾಭರಿತ ಸರ್ವೇಶ್ವರನ ಸಮ್ಮುಖದಲ್ಲಿ ಸೇವಾರ್ಥಿಗಳಾಗಿ ಸಿದ್ಧರಿರುವ ಏಳು ದೂತರಲ್ಲಿ ನಾನೂ
ಒಬ್ಬನು," ಎಂದನು.

16 ತೊಬೀತನು ಮತ್ತು ತೊಬಿಯಾಸನು ಇದನ್ನು ಕೇಳಿ ಭಯಭ್ರಾಂತರಾದರು; ಅಧೋಮುಖರಾಗಿ
ನೆಲಕ್ಕೆ ಬಿದ್ದರು. 17ಆದರೆ ರಫಯೇಲನು ಅವರಿಗೆ ಹೀಗೆಂದನು: "ಭಯಪಡಬೇಡಿ. ನಿಮಗೆ
ಸಮಾಧಾನವಾಗಲಿ. ದೇವರನ್ನು ಸದಾಕಾಲ ಸ್ತುತಿಸಿರಿ. 18ನನ್ನ ವಿಷಯವಾಗಿ ಹೇಳುವುದಾದರೆ, ನಾನು

ನಿಮ್ಮೊಡನೆ ಇದ್ದಾಗ, ನನ್ನ ಸ್ವಂತ ಇಚ್ಛೆಯಂತಲ್ಲ, ದೈವೇಚ್ಛೆಯಂತೆಯೇ ವರ್ತಿಸಿದೆ. ದಿನದಿನವೂ ಆ ದೇವರನ್ನು ಹೊಗಳಿರಿ. ಅವರ ಸ್ತುತಿಗೀತೆಗಳನ್ನು ಹಾಡಿರಿ. 19ನೀವು ನನ್ನನ್ನು ನೋಡುತ್ತಿದ್ದಂತೆ ನಾನು ನಿಜವಾಗಿಯೂ ಭುಜಿಸಲೂ ಇಲ್ಲ, ಪಾನ ಮಾಡಲೂ ಇಲ್ಲ. ನೀವು ನೋಡುತ್ತಿದ್ದುದ್ದು ಒಂದು ದೃಶ್ಯವಷ್ಟೆ. 20ಈಗ ನೀವು ಮೇಲಕ್ಕೆದ್ದು ದೇವರಲ್ಲಿ ನಂಬಿಕೆಯಿಡಿ; ವಿಶ್ವಾಸವಿಡಿ. ನೋಡಿ, ನನ್ನನ್ನು ಇಲ್ಲಿಗೆ ಕಳುಹಿಸಿದವರ ಬಳಿಗೆ ನಾನು ಏರಿ ಹೋಗುತ್ತಿದ್ದೇನೆ. ನಿಮಗೆ ಸಂಭವಿಸಿದ್ದ ಎಲ್ಲವನ್ನು ಬರೆದಿಡಿ." ಇಷ್ಟನ್ನು ಹೇಳಿ ರಫಯೇಲನು ಮೇಲಕ್ಕೆ ಏರಿಹೋದನು.

21 ಅನಂತರ ತೊಬೀತನು ಮತ್ತು ತೊಬಿಯಾಸನು ಮೇಲಕ್ಕೆದ್ದರು. ರಫಯೇಲನು ಅವರಿಗೆ ಮತ್ತೆ ಕಾಣಿಸಲಿಲ್ಲ. 22ಅವರು ದೇವರನ್ನು ಹೊಗಳುತ್ತಾ, ಅವರ ಸನ್ನುತಿಯನ್ನು ಹಾಡುತ್ತಾ ಅವರ ಮಹತ್ಕಾರ್ಯಗಳಲ್ಲಿ ತಮಗಿದ್ದ ವಿಶ್ವಾಸವನ್ನು ವ್ಯಕ್ತಪಡಿಸುತ್ತಾ ಬಂದರು. ದೇವರ ದೂತನೇ ಅವರಿಗೆ ದರ್ಶನವಿತ್ತಿದ್ದನಲ್ಲವೆ!

### ತೊಬೀತನ ಸ್ತುತಿಗೀತೆ

**13** ತೊಬೀತನು ಹೀಗೆಂದು
ಪ್ರಾರ್ಥಿಸಿದನು:
ಚಿರಂಜೀವಿಯಾದ ಸರ್ವೇಶ್ವರನಿಗೆ
ಸ್ತುತಿ ಸ್ತೋತ್ರ
ಚಿರಕಾಲವಿರುವುದು ಆತನ ಸಾಮ್ರಾಜ್ಯ.
2 ಶಿಕ್ಷಿಸುವವನೂ ಕ್ಷಮಿಸುವವನೂ ಆತನೇ
ಪಾತಾಳಕ್ಕಿಳಿಸುವವನೂ ಮೇಲಕ್ಕೆತ್ತುವವನೂ
ಆತನೇ
ಆತನ ಕೈಯಿಂದ ತಪ್ಪಿಸಿಕೊಳ್ಳುವವನು
ಯಾವನಿದ್ದಾನೆ?
3 ಇಸ್ರಯೇಲಿನ ಕುಲಪುತ್ರರೇ,
ದೇವಸ್ತುತಿಮಾಡಿ ಜನಾಂಗಗಳ ಮುಂದೆ
ಚದರಿಸಿಹನು ನಿಮ್ಮನ್ನು ಅವರ ಮಧ್ಯೆ.
4 ಅಲ್ಲೂ ತೋರ್ಪಡಿಸಿರುವನು ತನ್ನ ಪ್ರಭೆಯನು
ಗುಣಗಾನ ಮಾಡಿರಿ, ಸರ್ವಜೀವಿಗಳ ಮುಂದೆ
ಆತನನು.
ಆತನೇ ನಮ್ಮ ಸರ್ವೇಶ್ವರ, ಆತನೇ ನಮ್ಮ
ದೇವ
ಆತನೇ ನಮ್ಮ ತಂದೆ; ಆತನೇ ನಮ್ಮ ದೇವ
ಅನವರತ.
5 ದಂಡನೆ ನೀಡದೆ ಬಿಡನು ನಿಮ್ಮ
ದುಷ್ಕೃತ್ಯಗಳಿಗೆ
ಮರಳಿ ಕರುಣೆ ತೋರುವನು ನಿಮ್ಮೆಲ್ಲರಿಗೆ.
ಒಂದುಗೂಡಿಸುವನು ನಿಮ್ಮನ್ನು ಎಲ್ಲಾ
ರಾಷ್ಟ್ರಗಳಿಂದ,
ತಂದು ಸೇರಿಸುವನು ಚದರಿಹೋದ
ನಾಡುಗಳಿಂದ.

6 ಅಭಿಮುಖರಾದರೆ ನೀವು ಪೂರ್ಣ
ಹೃದಯದಿಂದ ಪೂರ್ಣಪ್ರಾಣದಿಂದ
ನಡೆದರೆ ಆತನ ಸಮ್ಮುಖದಲ್ಲಿ
ಸತ್ಯತೆಯಿಂದ,
ಮರೆಮಾಚಿಕೊಳ್ಳನಾತ ಮುಖವನ್ನು
ನಿಮ್ಮಿಂದ,
ಸ್ತುತಿಸಿರಿ ಸತ್ಯಸ್ವರೂಪಿಯಾದ ಸರ್ವೇಶ್ವರನನು
ಯುಗಯುಗಾಂತರಕ್ಕೂ ಆಳುವ ಅರಸನನು.
ನಾನಾತನ ಭಕ್ತನು, ಗಡೀಪಾರಾದ ಈ
ನಾಡಿನಲೂ
ಆತನ ಶಕ್ತಿಸಾಮರ್ಥ್ಯವನು ಸಾರುವೆನು
ದುಷ್ಟರ ಈ ರಾಷ್ಟ್ರದಲೂ.
ಪಾಪಾತ್ಮರೇ, ಹಿಂದಿರುಗಿ ಬನ್ನಿರಿ
ಆತನಿಗೆ ನ್ಯಾಯವಾದುದನ್ನೇ ಮಾಡಿರಿ
ಕಟಾಕ್ಷಿಸಿಯಾನು ನಿಮಗೆ ಕೃಪೆತೋರಿ.
7 ನಾನಾದರೋ ಗುಣಗಾನ ಮಾಡುವೆನು ನನ್ನ
ದೇವನನು,
ಸಂಕೀರ್ತಿಸುವುದು ನನ್ನ ಮನ ಪರಲೋಕ
ರಾಜನನು.
8 ದೇವರ ಮಹಿಮಾಸ್ತುತಿ ಇರಲಿ ಸರ್ವರ
ಬಾಯಲಿ,
ಆತನನು ಸಂಕೀರ್ತಿಸಲಿ ಜೆರುಸಲೇಮಿನಲಿ.
9 ಎಲೈ ಜೆರುಸಲೇಮೇ, ಪವಿತ್ರ ನಗರಿಯೇ,
ಶಿಕ್ಷಿಸುವನು ದೇವನು ನಿನ್ನ ಮಕ್ಕಳ
ದುಷ್ಕೃತ್ಯಗಳ ನಿಮಿತ್ತ,
ಕರುಣೆ ತೋರುವನು ಮರಳಿ ಸಜ್ಜನರ
ಸಂತತಿಯ ಪ್ರಯುಕ್ತ.
10 ವಂದಿಸಿರಿ ಸದ್ಗುಣಶೀಲ ಸರ್ವೇಶ್ವರನನು
ಸ್ತುತಿಸಿರಿ ಯುಗಯುಗಕ್ಕೂ ಆಳುವ
ಅರಸನನು,
ಆಗ ನಿರ್ಮಿಸಲಾಗುವುದು ಸಂತಸದಿ
ದೇವಾಲಯವನು.
ಹರ್ಷಗೊಳಿಸುವನಾತ ನಿಮ್ಮಲ್ಲಿ
ಸೆರೆಹೋದವರನು,
ಪ್ರೀತಿಸುವನು ನಿತ್ಯಕ್ಕೂ ನಿಮ್ಮ ದಲಿತರೆಲ್ಲರನು.
11 ಉಜ್ವಲ ಜ್ಯೋತಿಯೊಂದು ಬೆಳಗುವುದು
ಜಗಕೆಲ್ಲ,
ನಿನ್ನಲ್ಲಿಗೆ ಬರಲಿರುವುವು ದೂರದ
ರಾಷ್ಟ್ರಗಳೆಲ್ಲ.
ಧರೆಯ ಕಟ್ಟಕಡೆಯಿಂದ ಬರುವರು

ಶ್ರೀ ನಾಮದ ನಿವಾಸಕೆ,
ಕೈತುಂಬ ಕಾಣಿಕೆಯನು ತರುವರು
ಸ್ವರ್ಗಾಧಿಪತಿಗೆ.
ಸನ್ನುತಿಗಳ ಸಲ್ಲಿಸುವರು ನಿನ್ನೊಳು
ತಲತಲಾಂತರಕೂ
ಈ ಭವ್ಯ ನಗರದ ನಾಮ ಉಳಿಯುವುದು
ಸದಾಕಾಲಕೂ.
12 ಧಿಕ್ಕಾರ ನಿನ್ನ ವಿರುದ್ಧ ಮಾತೆತ್ತುವವರಿಗೆ !
ನಿನ್ನ ಸೋಲಿಸಿ, ಕೋಟೆಗಳ ನಾಶ
ಪಡಿಸುವವರಿಗೆ,
ನಿನ್ನ ಗೋಪುರಗಳ ಕೆಡವಿ, ಗೃಹಗಳನು
ಸುಡುವವರಿಗೆ.
ಸರ್ವದಾ ಶುಭವಾಗಲಿ, ನಿನ್ನನ್ನು ಪುನರ್
ನಿರ್ಮಿಸುವವರಿಗೆ.
13 ಸಂತೋಷಿಸಿರಿ ಸಜ್ಜನರ ಸಂತತಿಗಾಗಿ
ಸ್ತುತಿಸುವರವರು ಸತ್ಯ ದೇವರನು
ಒಟ್ಟಾಗಿ.
14 ನಿನಗೆ ಪ್ರೀತಿ ತೋರಿಸುವವರು ಧನ್ಯರು
ನಿನ್ನ ಏಳಿಗೆಗಾಗಿ ನಲಿವವರು ಧನ್ಯರು
ನಿನಗಾದ ಶಿಕ್ಷೆಗಾಗಿ ಶೋಕಿಸುವವರು
ಧನ್ಯರು!
ಏಕೆನೆ ನಲಿದಾಡುವರು ನಿನ್ನೊಂದಿಗೆ,
ನಿನ್ನ ಸೌಭಾಗ್ಯವನೆಲ್ಲ
ಕಾಣುವರು ಸರ್ವಕಾಲಕೆ.
15 ನನ್ನ ಮನವೇ, ಸ್ತುತಿಸ್ತೋತ್ರಗೈ
ರಾಜಾಧಿರಾಜನಾದ ಸರ್ವೇಶ್ವರನಿಗೆ.
16 ಏಕೆನೆ, ಪುನರ್ ನಿರ್ಮಾಣವಾಗುವುದು
ಜೆರುಸಲೇಮ್ ನಗರ,
ಅದಾಗುವುದು ಆತನ ಶಾಶ್ವತ ಮಂದಿರ;
ನಿನ್ನ ವೈಭವ ನೋಡಲು, ಸ್ವರ್ಗರಾಜನಿಗೆ
ತಲೆಬಾಗಲು
ನನ್ನ ಸಂತಾನದ ಕುಡಿ ಉಳಿವುದಾದರೆ
ಅದೆಂಥ ಭಾಗ್ಯ ನನ್ನದು !
17 ನಿರ್ಮಿಸಲಾಗುವುದಾ ಜೆರುಸಲೇಮಿನ
ದ್ವಾರಗಳನು ಇಂದ್ರನೀಲ ಮತ್ತು
ಪಚ್ಚೆಗಳಿಂದ,
ಅದರ ಗೋಡೆಗಳನ್ನೆಲ್ಲ ಅಮೂಲ್ಯ
ರತ್ನಗಳಿಂದ,
ಅದರ ಗೋಪುರಗಳನು ಬಂಗಾರದಿಂದ,
ಅದರ ಕೋಟೆಗಳನು ಅಪ್ಪಟ ಚಿನ್ನದಿಂದ,

ಅದರ ಬೀದಿಗಳನು ಹೊದಿಸಲಾಗುವುದು
ಪೀತರತ್ನ ಓಫೀರಿನ ರತ್ನಗಳಿಂದ.
18 ಹಾಡಲಾಗುವುದು ಸಂತಸ ಗೀತೆಗಳನು
ಜೆರುಸಲೇಮಿನ ದ್ವಾರಗಳಲಿ
ಅಲ್ಲೆಲೂಯ ಘೋಷಿಸಲಾಗುವುದು
ಅದರ ಮನೆಗಳಲಿ.
ಇಸ್ರಯೇಲಿನ ದೇವರಿಗೆ ಸ್ತೋತ್ರವಾಗಲಿ
ನಿತ್ಯಕೂ ಆತನ ಶ್ರೀನಾಮ ಅಲ್ಲಿ
ಪೂಜಿತವಾಗಲಿ!
ಇತಿ ತೊಬೀತನ ಸ್ತುತಿಗೀತೆ.

## ತೊಬೀತನ ಅಂತಿಮ ಬುದ್ಧಿವಾದ

**14** 1–2 ತೊಬೀತನು ಕುರುಡನಾದಾಗ ಅವನಿಗೆ 62 ವರ್ಷ ವಯಸ್ಸು. ಕಣ್ಣುಗಳು ಬಂದನಂತರ ಅವನು ದೀರ್ಘಕಾಲ ನೆಮ್ಮದಿಯಿಂದ ಬಾಳಿದನು. ದಾನಧರ್ಮ ಮಾಡುವುದರಲ್ಲೂ ದೇವರನ್ನು ಸ್ತುತಿಸಿ ಅವರ ಮಹತ್ಕಾರ್ಯಗಳನ್ನು ಸಾರುವುದರಲ್ಲೂ ತನ್ನ ಜೀವಮಾನವನ್ನು ಕಳೆದನು. 112 ವರ್ಷ ತುಂಬಿದಾಗ ಶಾಂತಿಯಿಂದ ಅಸುನೀಗಿದನು: ಶವ ಸಂಸ್ಕಾರವನ್ನು ಗೌರವದಿಂದ ಜರುಗಿಸಿ ಆತನನ್ನು ನಿನೆವೆಯಲ್ಲಿ ಸಮಾಧಿ ಮಾಡಲಾಯಿತು.

3 ಸಾಯುವುದಕ್ಕೆ ಮುನ್ನ ತೊಬೀತನು ತನ್ನ ಮಗ ತೊಬಿಯಾಸನನ್ನು ಕರೆದು ಇಂತೆಂದನು:
4“ಮಗನೇ, ನಿನ್ನ ಮಕ್ಕಳನ್ನು ಕರೆದುಕೊಂಡು ಬೇಗನೆ ಮೇದ್ಯನಾಡಿಗೆ ಹೋಗು. ಏಕೆಂದರೆ, ನಿನೆವೆಯ ವಿರುದ್ಧ ಯೋನನು ಪ್ರವಾದಿಸಿದ ದೇವರ ವಾಕ್ಯ ನೆರವೇರಲಿದೆ. ಇದು ನನ್ನ ದೃಢನಂಬಿಕೆ. ಪ್ರವಾದಿಗಳು ಮುಂತಿಳಿಸಿದ ಎಲ್ಲಾ ಘಟನೆಗಳು ನಿನೆವೆ ಮತ್ತು ಅಸ್ಸೀರಿಯಾಗೆ ಸಂಭವಿಸುತ್ತವೆ. ದೇವರು ಕಳುಹಿಸಿದ ಇಸ್ರಯೇಲಿನ ಪ್ರವಾದಿಗಳು ನುಡಿದುದೆಲ್ಲ ಸಂಭವಿಸಿಯೇ ತೀರುವುದು. ಅದರಲ್ಲಿ ಒಂದೂ ನಿರರ್ಥಕವಾಗದು. ಎಲ್ಲವೂ ಸೂಕ್ತ ಸಮಯದಲ್ಲಿ ಈಡೇರುವುದು. ಆದುದರಿಂದ ಅಸ್ಸೀರಿಯ ಹಾಗೂ ಬಾಬಿಲೋನಿನಲ್ಲಿ ಇರುವುದಕ್ಕಿಂತ ಮೇದ್ಯ ನಾಡಿನಲ್ಲಿರುವುದು ನಿಮಗೆ ಕ್ಷೇಮಕರ. ದೇವರು ನುಡಿದದ್ದು ಸತ್ಯವಾಗಿ ಕೈಗೂಡಲೇ ತೀರಬೇಕು. ಪ್ರವಾದನೆಯ ಯಾವ ವಾಕ್ಯವೂ ನಿರರ್ಥಕವಾಗದು. ಇದು ನನ್ನ ಅರಿಕೆ ಹಾಗೂ ನಂಬಿಕೆ.

“ನಮ್ಮ ಬಂಧುಬಳಗದವರೆಲ್ಲರೂ ಇಸ್ರಯೇಲ್ ನಾಡಿನ ನಿವಾಸಿಗಳೆಲ್ಲರೂ ಚದರಿ ಹೋಗುವರು. ಈ ಒಳ್ಳೆಯ ನಾಡಿನಿಂದ ಗಡೀಪಾರಾಗುವರು. ಇಸ್ರಯೇಲ್ ನಾಡೆಲ್ಲವೂ ನಿರ್ಜನ ಪ್ರದೇಶವಾಗುವುದು, ಸಮಾರಿಯ ಮತ್ತು ಜೆರುಸಲೇಮ್ ನಗರಗಳು ಕೂಡ ಪಾಳು ಬೀಳುವುವು. ಮಾತ್ರವಲ್ಲ, ದೇವರ ಮಹಾ ದೇವಾಲಯ ಸುಟ್ಟು ಹೋಗಿ ನೆಲಸಮವಾಗುವುದು. ಕೆಲವು ಕಾಲದ ತನಕ ಅದು ಪಾಳು ಬಿದ್ದಿರುವುದು.

5 ದೇವರು ಪುನಃ ತಮ್ಮ ಜನರಿಗೆ ಕೃಪೆತೋರಿ ಇಸ್ರಯೇಲಿಗೆ ಅವರನ್ನು ಮರಳಿ ಕರೆದುತರುವರು. ಜನರು ಮತ್ತೆ ದೇವರ ಮಹಾದೇವಾಲಯವನ್ನು ಕಟ್ಟುವರು. ಆದರೆ ಅದು ಮೊದಲಿನಂತೆ ಇರದು. ಈಡೇರುವ ಕಾಲ ಬರುವವರೆಗೆ ಹಾಗೆಯೇ ಇರುವುದು. ಅನಂತರ ಜನರು ಗಡೀಪಾರಾಗಿದ್ದ ಎಲ್ಲ ಕಡೆಗಳಿಂದ ಹಿಂದಿರುಗುವರು. ಭವ್ಯವಾದ ಜೆರುಸಲೇಮನ್ನು ಪುನಃ ನಿರ್ಮಿಸುವರು. ಮಹಾ ದೇವಾಲಯವನ್ನು ಸಹ ಮರಳಿಕಟ್ಟುವರು. ಹೀಗೆ ಇಸ್ರಯೇಲಿನ ಪ್ರವಾದಿಗಳು ನುಡಿದುದೆಲ್ಲವು ನೆರವೇರುವುದು.

6 ಆಗ ಜಗದ ಎಲ್ಲಾ ರಾಷ್ಟ್ರಗಳು ಮನಪರಿವರ್ತನೆಗೊಂಡು ನಿಜದೇವರನ್ನು ಪ್ರಾಮಾಣಿಕವಾಗಿ ಆರಾಧಿಸುವರು. ಆಗ ತಮ್ಮನ್ನು ಮರುಳುಗೊಳಿಸಿ ಮಿಥ್ಯ ಪಥಕ್ಕೆ ಎಳೆದ ಎಲ್ಲಾ ವಿಗ್ರಹಗಳನ್ನು ತೊರೆದುಬಿಡುವರು.
7ನಿತ್ಯದೇವರನ್ನು ಋಜುವಾದ ರೀತಿಯಲ್ಲಿ ಆರಾಧಿಸುವರು. ದೇವರಲ್ಲಿ ನಿಜವಾದ

ನಂಬಿಕೆಯಿಟ್ಟು ಸಂರಕ್ಷಣೆ ಹೊಂದಿದ ಇಸ್ರಯೇಲರೆಲ್ಲರನ್ನು ಆ ದಿನಗಳಲ್ಲಿ ಒಟ್ಟಾಗಿ ಸೇರಿಸಲಾಗುವುದು. ಅವರೆಲ್ಲರೂ ಜೆರುಸಲೇಮಿಗೆ ತೆರಳಿ ಅಬ್ರಹಾಮನ ನಾಡಿನಲ್ಲಿ ಸುರಕ್ಷಿತವಾಗಿ ಬಾಳುವರು. ಆ ನಾಡು ಅವರದಾಗುವುದು. ದೇವರನ್ನು ಪ್ರಾಮಾಣಿಕವಾಗಿ ಪ್ರೀತಿಸುವವರಿಗೆ ಸುಖಸಂತೋಷ ಇರುವುದು. ಆದರೆ ಪಾಪಾಕ್ರಮಗಳನ್ನು ಮಾಡಿ ಅನ್ಯಾಯವಾಗಿ ವರ್ತಿಸುವವರು ಧರೆಯಿಂದ ಮಾಯವಾಗುವರು.

8 “ಆದ್ದರಿಂದ ಮಕ್ಕಳೇ, ದೇವರಿಗೆ ಪ್ರಾಮಾಣಿಕ ಸೇವೆ ಸಲ್ಲಿಸಿರಿ. ಅವರಿಗೆ ಪ್ರಿಯವಾದುದೆಲ್ಲ ಮಾಡಿರಿ. ಇದು ನನ್ನ ಆಜ್ಞೆ, 9ನಿಮ್ಮ ಮಕ್ಕಳಿಗೂ ಸಹಾ ಈ ಆಜ್ಞೆ ವಿಧಿಸಿರಿ. ಅವರು ಸತ್ಯವಾದುದನ್ನೇ ಮಾಡಬೇಕು; ದಾನಧರ್ಮ ನೀಡಬೇಕು; ದೇವರನ್ನು ಸ್ಮರಿಸಬೇಕು; ಎಲ್ಲ ಕಾಲದೊಳು ಅವರ ನಾಮವನ್ನು ಪೂಜಿಸಬೇಕು. ಇವುಗಳನ್ನು ಪೂರ್ಣಶಕ್ತಿಯಿಂದ, ಪ್ರಾಮಾಣಿಕತೆಯಿಂದ ನೆರವೇರಿಸಬೇಕು.

10 “ಆದ್ದರಿಂದ ಮಗನೇ, ನಿನೆವೆಯನ್ನು ಬಿಟ್ಟು ತೆರಳು. ಇಲ್ಲಿ ನೆಲೆಸಬೇಡ, ನಿನ್ನ ತಾಯಿ ಸತ್ತ ಬಳಿಕ ಆಕೆಯನ್ನು ನನ್ನ ಬಳಿ ಸಮಾಧಿ ಮಾಡಿದ ಮೇಲೆ ಒಂದು ರಾತ್ರಿಯಾದರೂ ಈ ನಗರದಲ್ಲಿರಬೇಡ. ಏಕೆಂದರೆ ನನಗೆ ತಿಳಿದಿರುವಂತೆ ಇಲ್ಲಿ ದುಷ್ಟತನ ತುಂಬಿದೆ. ಮೋಸ ವಂಚನೆಗಳು ತಾಂಡವವಾಡುತ್ತಿವೆ; ಜನರು ನಾಚಿಕೆ ಎಂಬುದನ್ನೇ ಮರೆತು ಜೀವಿಸುತ್ತಿದ್ದಾರೆ. ಮಗನೇ, ತನ್ನ ಸ್ವಂತ ಸಾಕುತಂದೆ ಅಹೀಕರನಿಗೆ ನಾದಾಬನು ಮಾಡಿದ್ದನ್ನು ಯೋಚಿಸಿ ನೋಡು. ಅಹೀಕರನು ಕೊಲೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಜೀವದಿಂದಿರುವಾಗಲೇ ಸಮಾಧಿಯಲ್ಲಿ ತಲೆಮರೆಸಿಕೊಳ್ಳಬೇಕಾಯಿತಲ್ಲವೆ? ದೇವರು ನಾದಾಬನಿಗೆ ಅವಮಾನಕರ ದಂಡನೆಯನ್ನು ನೀಡಿದರಲ್ಲವೆ? ಈ ಕಾರಣ ಅಹೀಕರನು ಬೆಳಕಿಗೆ ಬಂದನು; ನಾದಾಬನು ಅವನನ್ನು ಕೊಲ್ಲಲೆತ್ನಿಸಿದ್ದರಿಂದ ಅನಂತ ಅಂಧಕಾರಕ್ಕೆ ತೆರಳಿದನು. ಅಹೀಕರನು ದಾನಧರ್ಮ ಮಾಡಿದ್ದರಿಂದಲೇ ನಾದಾಬನು ಒಡ್ಡಿದ ಮಾರಕ ಬಲೆಯಿಂದ ಪಾರಾದನು. ನಾದಾಬನಾದರೋ ತಾನೊಡ್ಡಿದ ಬಲೆಯಲ್ಲಿ ತಾನೇ ಬಿದ್ದು ನಾಶವಾದನು.

11 “ಆದ್ದರಿಂದ ಮಕ್ಕಳೇ, ದಾನಧರ್ಮದಿಂದ ಲಭಿಸುವ ಫಲವನ್ನು, ಅನ್ಯಾಯ ಅಕ್ರಮಗಳು ತರುವ ಮರಣವನ್ನು ಯೋಚಿಸಿ ನೋಡಿ; ಈಗ ನನಗೆ ಉಸಿರುಕಟ್ಟುತ್ತಿದೆ,” ಎಂದನು.

ಅನಂತರ ತೊಬೀತನನ್ನು ಹಾಸಿಗೆಯ ಮೇಲೆ ಮಲಗಿಸಿದರು. ಅಷ್ಟರಲ್ಲಿ ಅವನು ಸತ್ತು ಹೋದನು. ಅವನನ್ನು ಯೋಗ್ಯ ಮರ್ಯಾದೆಯಿಂದ ಶವಸಂಸ್ಕಾರ ಮಾಡಲಾಯಿತು. 12ತನ್ನ ತಾಯಿ ಮೃತಳಾದಾಗ, ತೊಬಿಯಾಸನು ಆಕೆಯನ್ನು ತನ್ನ ತಂದೆಯ ಪಕ್ಕದಲ್ಲಿ ಸಮಾಧಿ ಮಾಡಿದನು. ಬಳಿಕ ಮಡದಿಮಕ್ಕಳ ಸಮೇತ ಮೇದ್ಯ ನಾಡಿಗೆ ಬಂದು ಎಕ್‍ಬತಾನ ನಗರದಲ್ಲಿದ್ದ ತನ್ನ ಮಾವ ರಾಗುಯೇಲನೊಂದಿಗೆ ವಾಸಮಾಡಿದನು. 13ತನ್ನ ಅತ್ತೆ ಮಾವಂದಿರನ್ನು ಅವರ ಮುಪ್ಪು ವಯಸ್ಸಿನಲ್ಲಿ ಅಕ್ಕರೆಯಿಂದ ನೋಡಿಕೊಂಡನು. ಅವರು ಸತ್ತಾಗ ಮೇದ್ಯನಾಡಿನ ಎಕ್‍ಬತಾನದಲ್ಲಿ ಸಮಾಧಿ ಮಾಡಿದನು. ತನ್ನ ತಂದೆ ತೊಬೀತನ ಆಸ್ತಿಗೂ ತನ್ನ ಮಾವ ರಾಗುಯೇಲನ ಆಸ್ತಿಗೂ ಅವನೇ ವಾರಸುದಾರನಾದನು.

14 ತೊಬಿಯಾಸನು ಘನತೆ ಗೌರವದಿಂದ ಬಾಳಿದನು; ವಯೋವೃದ್ಧನಾಗಿ ಸತ್ತಾಗ ಅವನಿಗೆ 117 ವರ್ಷವಾಗಿತ್ತು. 15ಸಾಯುವುದಕ್ಕೆ ಮುಂಚೆ ನಿನೆವೆ ನಗರದ ವಿನಾಶ ಕುರಿತು ಕಿವಿಯಾರೆ ಕೇಳಿದನು; ಅದರ ನಿವಾಸಿಗಳು ಮೇದ್ಯಕ್ಕೆ ಸೆರೆಯಾಗಿ ಬಂದುದನ್ನೂ ಕಣ್ಣಾರೆ ನೋಡಿದನು. ಮೇದ್ಯದ ಅರಸ ಆ ಜನರನ್ನು ಕೈದಿಗಳಾಗಿ ಹಿಡಿದು ತಂದಿದ್ದನು. ದೇವರು ನಿನೆವೆ ಹಾಗೂ ಅಸ್ಸೀರಿಯದ ಜನರಿಗೆ ವಿಧಿಸಿದ ದಂಡನೆಗಾಗಿ ತೊಬಿಯಾಸನು ದೇವರಿಗೆ ಧನ್ಯವಾದ ಸಲ್ಲಿಸಿದನು. ಸಾಯುವುದಕ್ಕೆ ಮುಂಚೆ ನಿನೆವೆಗಾದ ಪರಿಸ್ಥಿತಿ ಅವನಿಗೆ ಸಂತೋಷವನ್ನು ತಂದಿತ್ತು. ದೇವರಾದ ಸರ್ವೇಶ್ವರನಿಗೆ ನಿರಂತರ ಸ್ತೋತ್ರವನ್ನು ಸಲ್ಲಿಸಿದನು. (ಆಮೆನ್).